# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಮಂಗಳವಾರ, ಏಪ್ರಿಲ್ 06, 2021

ಸಂಪುಟ : 47 ಸಂಚಿಕೆ : 337 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## 9ನೇ ತರಗತಿ ಪರೀಕ್ಷೆ ಬಗ್ಗೆ ಎರಡು ದಿನಗಳಲ್ಲಿ ನಿರ್ಧಾರ



ಬೆಂಗಳೂರು, ಏ. 5 - ಒಂದರಿಂದ 9ನೇ ತರಗತಿ ವರೆಗೆ ಪರೀಕ್ಷೆ ನಡೆಸಬೇಕೇ-ಬೇಡವೇ ಎಂಬ ಬಗ್ಗೆ ಇನ್ನೆರಡು ದಿನಗಳಲ್ಲಿ ನಿರ್ಧಾರ ಕೈಗೊಳ್ಳುವುದಾಗಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದ್ದಾರೆ.

ರಾಜ್ಯದಲ್ಲಿ ಕೊರೊನಾ ಸೋಂಕಿನ ಎರಡನೇ ಅಲೆಯ ಅಬ್ಬರ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ, ಅದರಲ್ಲೂ ಶಾಲೆಗೆ ತೆರಳುತ್ತಿರುವ ಮಕ್ಕಳಲ್ಲೂ ಸೋಂಕು ಪ್ರಕರಣಗಳೂ ವರದಿಯಾಗಿವೆ. ಇಂತಹ ಸನ್ನಿವೇಶದಲ್ಲಿ ಕಳೆದ ವರ್ಷದಂತೆ ಈ ವರ್ಷವೂ ಮಕ್ಕಳಿಗೆ (2ನೇ ಪುಟಕ್ಕೆ)

## ಡಿನೋಟಿಫಿಕೇಷನ್: ಸಿಎಂ ವಿರುದ್ಧ ಕ್ರಮಕ್ಕೆ ತಡೆ



ನವದೆಹಲಿ, ಏ. 5 - ಜಮೀನು ಡಿನೋಟಿಫಿಕೇಷನ್‌ನಲ್ಲಿ ಅವ್ಯವಹಾರ ನಡೆದಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ತನಿಖೆ ನಡೆಸುವುದಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ಹೊರಡಿಸಿದೆ.

ತಮ್ಮ ವಿರುದ್ಧದ ಕ್ರಿಮಿನಲ್ (4ನೇ ಪುಟಕ್ಕೆ)

# ಮೇ ವರೆಗೂ ಕೊರೊನಾ ಪರಿಣಾಮ

## ಕಠಿಣ ಮುನ್ನೆಚ್ಚರಿಕೆ ಕ್ರಮಕ್ಕೆ ತಾಂತ್ರಿಕ ಸಲಹಾ ಸಮಿತಿ ಸರ್ಕಾರಕ್ಕೆ ವರದಿ

ಬೆಂಗಳೂರು, ಏ. 5 - ಕೊರೊನಾ ಸೋಂಕಿನ ಎರಡನೇ ಅಲೆ ಮೇ ಅಂತ್ಯದವರೆಗೂ ರಾಜ್ಯದಲ್ಲಿ ತೀವ್ರ ಪರಿಣಾಮ ಬೀರುವ ಸಾಧ್ಯತೆ ಇದ್ದು, ಕಠಿಣ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ತಾಂತ್ರಿಕ ಸಲಹಾ ಸಮಿತಿ ಸರ್ಕಾರಕ್ಕೆ ವರದಿ ಸಲ್ಲಿಸಿದೆ.

ಸಾರ್ವಜನಿಕ ಸಮಾರಂಭಗಳನ್ನು ಸಂಪೂರ್ಣ ನಿಷೇಧಿಸಬೇಕು, ಜನದಟ್ಟಣೆ ಪ್ರದೇಶಗಳಲ್ಲಿ ಸಾರ್ವಜನಿಕರು ಗುಂಪು ಸೇರುವುದನ್ನು ತಡೆಗಟ್ಟಲು ಕಠಿಣ ನಿಲುವುಗಳನ್ನು ತೆಗೆದುಕೊಳ್ಳಬೇಕು. ಸಾಮಾಜಿಕ ಅಂತರ ಕಾಯ್ದುಕೊಳ್ಳದ ಹಾಗೂ ಮಾಸ್ಕ್ ಧರಿಸದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಿ ಎಂದು ವರದಿಯಲ್ಲಿ ಹೇಳಲಾಗಿದೆ.

ಸೋಂಕು ಪರೀಕ್ಷೆ ಹಾಗೂ ಲಸಿಕೆ ನೀಡಿಕೆ ಪ್ರಮಾಣ ಹೆಚ್ಚಿಸಿ, ಸೋಂಕು ಹರಡುತ್ತಿರುವ ಪ್ರದೇಶವನ್ನು ಕಂಟೈನ್‌ಮೆಂಟ್ ವಲಯವಾಗಿ ಪರಿಗಣಿಸಿ. ನಗರ ಪ್ರದೇಶಗಳಲ್ಲಿ ವ್ಯಾಪಕವಾಗಿ ಹರಡುತ್ತಿರುವ ಸೋಂಕು ಗ್ರಾಮೀಣ ಪ್ರದೇಶಕ್ಕೆ ತಲುಪದಂತೆ ನೋಡಿಕೊಳ್ಳಲು ಬಿಗಿ ಕ್ರಮ ಕೈಗೊಳ್ಳಿ.

**ಖಾಸಗಿ ಆಸ್ಪತ್ರೆಗಳಲ್ಲಿ ಕೊರೊನಾ ಸೋಂಕಿತರಿಗೆ ಶೇ. 20ರಷ್ಟು ಹಾಸಿಗೆಗಳನ್ನು ಮೀಸಲಿಟ್ಟಿದ್ದು, ಅವುಗಳ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳಲಿದೆ. ಇದರೊಂದಿಗೆ ಐಸಿಯು ಹಾಸಿಗೆಗಳ ಸಂಖ್ಯೆಯನ್ನೂ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ**

**- ಡಾ. ಸುಧಾಕರ್, ಆರೋಗ್ಯ ಸಚಿವ**

ಬಹುಸಮುಚ್ಚಯ ಕಟ್ಟಡಗಳು, ಹವಾ ನಿಯಂತ್ರಣ ಕೊಠಡಿ, ಬಸ್ ನಿಲ್ದಾಣ ಮತ್ತು ವಾಣಿಜ್ಯ ಕೇಂದ್ರಗಳಲ್ಲಿ ಸೋಂಕು ತೀವ್ರಗತಿಯಲ್ಲಿ ಹರಡುತ್ತಿದೆ. ಈಗಾಗಲೇ ಸರ್ಕಾರಕ್ಕೆ ನೀಡಿರುವ ವರದಿಗಳನ್ನು ಆಧಾರವಾಗಿಟ್ಟುಕೊಂಡು ಬಿಗಿ ಕ್ರಮ ಕೈಗೊಂಡರೆ ಸೋಂಕು ನಿಯಂತ್ರಣಕ್ಕೆ ತರಲು ಸಾಧ್ಯ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಆರೋಗ್ಯ ಸಚಿವ ಡಾ. ಕೆ.ಸುಧಾಕರ್, ಕರ್ನಾಟಕದಲ್ಲಿ ತೀವ್ರಗತಿಯಲ್ಲಿ ಹೆಚ್ಚುತ್ತಿರುವ ಸೋಂಕು ತಡೆಗಟ್ಟಲು ಕಠಿಣ ಹಾಗೂ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಗಳಿಗೆ ತಿಳಿಸಿದ್ದಾರೆ ಎಂದರು.

ಅಷ್ಟೇ ಅಲ್ಲ ಕಠಿಣ ತೀರ್ಮಾನಗಳನ್ನು ಪಾಲಿಸಲೇಬೇಕು ಎಂದು ಆದೇಶಿಸಿದ್ದಾರೆ. ನಾವು ಈಗಾಗಲೇ ಕೆಲವು ನಿರ್ಧಾರಗಳನ್ನು ಕೈಗೊಂಡಿದ್ದು, ಸಂಬಂಧಪಟ್ಟ ಇಲಾಖೆಗಳು ಅವುಗಳನ್ನು ಇಂದಿನಿಂದಲೇ ಜಾರಿಗೆ ತರಲಿವೆ. ಸಲಹಾ ಸಮಿತಿ ಮತ್ತೊಂದು ವರದಿ ನೀಡಿದ್ದು, ತೀವ್ರ ಮುಂಜಾಗ್ರತಾ ಕ್ರಮಗಳಿಂದ ಮಾತ್ರ ಸೋಂಕು ತಡೆ ಸಾಧ್ಯ ಎಂದಿದ್ದಾರೆ. ಮುನ್ನೆಚ್ಚರಿಕೆಯಾಗಿ (2ನೇ ಪುಟಕ್ಕೆ)

### ಮೊದಲ ಬಾರಿಗೆ ಒಂದೇ ದಿನ ಲಕ್ಷ ಸೋಂಕಿತರು

ನವದೆಹಲಿ, ಏ. 5 - ದೇಶದಲ್ಲಿ ಕೊರೊನಾ ಕಾಣಿಸಿಕೊಂಡ ನಂತರ ಇದೇ ಮೊದಲ ಬಾರಿಗೆ ಒಂದೇ ದಿನದಲ್ಲಿ ಕಂಡು ಬರುವ ಸೋಂಕುಗಳ ಸಂಖ್ಯೆ ಲಕ್ಷದ ಗಡಿ ದಾಟಿದೆ. ಸೋಮವಾರ ಒಂದೇ ದಿನ 1,03,558 ಸೋಂಕಿತರು ಕಂಡು ಬಂದಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

**ಸಕ್ರಿಯ ಸೋಂಕಿತರ ಸಂಖ್ಯೆ 7.41 ಲಕ್ಷಕ್ಕೆ**

ಕಳೆದ ವರ್ಷ ಸೆಪ್ಟೆಂಬರ್ 17ರಂದು ಒಂದೇ ದಿನ ಅತಿ ಹೆಚ್ಚಿನ 97,894 ಸೋಂಕಿತರು ಕಂಡು ಬಂದಿದ್ದರು. ಸೋಮವಾರದಂದು ಕೊರೊನಾದಿಂದ 478 ಜನರು ಸಾವನ್ನಪ್ಪಿದ್ದಾರೆ. ಸತತ 26 ದಿನಗಳಿಂದ ಸಕ್ರಿಯ ಸೋಂಕಿತರ ಸಂಖ್ಯೆ ಏರುಮುಖವಾಗಿದ್ದು, ಈಗ 7.41 ಲಕ್ಷಕ್ಕೆ ತಲುಪಿದೆ.

**25 ದಿನಗಳಲ್ಲೇ ಏರಿಕೆ :** ಪ್ರತಿನಿತ್ಯ ಕಂಡು ಬರುವ ಕೊರೊನಾ ಸೋಂಕುಗಳ ಸಂಖ್ಯೆ ಕೇವಲ 25 ದಿನಗಳಲ್ಲಿ 20 ಸಾವಿರದಿಂದ ಲಕ್ಷಕ್ಕೆ ತಲುಪಿದೆ. ಕಳೆದ ವರ್ಷ ಈ ಸಂಖ್ಯೆಗೆ ತಲುಪಲು 76 ದಿನಗಳು ಹಿಡಿದಿದ್ದವು. ಮಹಾರಾಷ್ಟ್ರದಲ್ಲಿ ಒಂದೇ ದಿನ ಅತಿ ಹೆಚ್ಚಿನ 56,074 ಸೋಂಕಿತರು ಕಂಡು ಬಂದಿದ್ದಾರೆ. **ಶಾಲೆಗಳು** (2ನೇ ಪುಟಕ್ಕೆ)

# ಸ್ಮಾರ್ಟ್ ಕಾಮಗಾರಿಗಳ ವೇಗ ಹೆಚ್ಚಿಸಲು ತಾಕೀತು

## ಅಧಿಕಾರಿಗಳು, ಪಾಲಿಕೆ ಸದಸ್ಯರೊಂದಿಗೆ ಕಾಮಗಾರಿ ವೀಕ್ಷಿಸಿದ ಸಂಸದ ಸಿದ್ದೇಶ್ವರ



ದಾವಣಗೆರೆ, ಏ.5- ನಗರದಲ್ಲಿ ನಡೆಯುತ್ತಿರುವ ಸ್ಮಾರ್ಟ್ ಸಿಟಿ ಕಾಮಗಾರಿಗಳ ವೇಗವನ್ನು ಮತ್ತಷ್ಟು ಹೆಚ್ಚಿಸಿ, ನಿಗದಿತ ಅವಧಿಯೊಳಗೆ ಮುಗಿಸುವಂತೆ ಸಂಸದ ಜಿ.ಎಂ. ಸಿದ್ದೇಶ್ವರ ಎಂಜಿನಿಯರ್‌ಗಳು ಹಾಗೂ ಗುತ್ತಿಗೆದಾರರಿಗೆ ತಾಕೀತು ಮಾಡಿದರು.

ಸೋಮವಾರ ಮುಂಜಾನೆ ಜಿಲ್ಲಾಧಿಕಾರಿ, ಪಾಲಿಕೆ ಆಯುಕ್ತರು, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕರುಗಳನ್ನೊಳಗೊಂಡು ಅಧಿಕಾರಿಗಳು ಹಾಗೂ ಮಹಾನಗರ ಪಾಲಿಕೆ ಸದಸ್ಯರ ತಂಡ ದೊಂದಿಗೆ ಸಂಸದರು ಹಲವೆಡೆ ನಡೆಯುತ್ತಿರುವ ಕಾಮಗಾರಿ ಸ್ಥಳಗಳಿಗೆ ಭೇಟಿ ನೀಡಿ ವೀಕ್ಷಿಸಿದರು.

ನಗರದ ಜಿಎಂಐಟಿ ಕಾಲೇಜಿನಿಂದ ಹೊರಟ ತಂಡ ಶಿವಾಲಿ ಟಾಕೀಸ್, ಹಿಂದೂ ರುದ್ರಭೂಮಿ, ಗಾಂಧೀನಗರ ವೃತ್ತ, ಅಂಬೇಡ್ಕರ್ ವೃತ್ತ, ಭಾಷಾನಗರ, ಎಸ್‌ಪಿಎಸ್ ನಗರ, ಯಲ್ಲಮ್ಮ ನಗರ ಸೇರಿದಂತೆ ಕುಂದುವಾಡ ಕೆರೆ ಹಾಗೂ ಸುತ್ತಮುತ್ತ ಇರುವ ಸ್ಥಳಗಳಿಗೆ ಭೇಟಿ ನೀಡಿ ಕಾಮಗಾರಿಗಳನ್ನು ವೀಕ್ಷಿಸಿದರು.

ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ್, ಸ್ಮಾರ್ಟ್ ಸಿಟಿ ಕಾಮಗಾರಿ ಕಳಪೆ ಹಾಗೂ ವಿಳಂಬದ ಕುರಿತು ಸಾರ್ವಜನಿಕರಿಂದ ದೂರು ಬಂದ ಹಿನ್ನೆಲೆಯಲ್ಲಿ ಅಧಿಕಾರಿಗಳು ಹಾಗೂ ಪಾಲಿಕೆ ಸದಸ್ಯರೊಂದಿಗೆ ಕಾಮಗಾರಿಗಳನ್ನು ವೀಕ್ಷಿಸಿದ್ದು, ಕಾಮಗಾರಿ ಕಳಪೆಯಾದ ಕಡೆ ಗುತ್ತಿಗೆದಾರರು ಹಾಗೂ ಅಧಿಕಾರಿಗಳಿಗೆ ಕಳಪೆಯಾಗದಂತೆ ಎಚ್ಚರ ವಹಿಸಲು ಸೂಚಿಸಿದ್ದೇನೆ ಎಂದರು.

ಜಲ ಸಿರಿ ಸೇರಿದಂತೆ ಕೆಲವು ಕಾಮಗಾರಿಗಳು ನಿಧಾನಗತಿಯಲ್ಲಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಹಗಲು-ರಾತ್ರಿ ಕೆಲಸ ಮಾಡಿ ಶೀಘ್ರ ಕಾಮಗಾರಿ ಮುಗಿಸುವಂತೆ ಸೂಚಿಸಿರುವುದಾಗಿ ಹೇಳಿದರು.

ನಮ್ಮ ಈ ಪ್ರವಾಸದಿಂದಾಗಿ ನನಗೂ ಸೇರಿದಂತೆ ಪಾಲಿಕೆ ಸದಸ್ಯರು, ಅಧಿಕಾರಿಗಳಿಗೆ ಸಮಸ್ಯೆಗಳ ಬಗ್ಗೆ ಅರಿವಾಗಿದೆ. ಹಲವು ವಿಷಯಗಳನ್ನು ತಿಳಿದುಕೊಳ್ಳಲು ಸಹಕಾರಿಯಾಗಿದೆ. ಕೇವಲ ನಾವು ಅಥವಾ ಜಿಲ್ಲಾಧಿಕಾರಿಗಳಿಂದ ಕಾಮಗಾರಿಗಳ ಮೇಲೆ ನಿಗಾವಹಿಸುವುದು ಸಾಧ್ಯವಾಗದು. ಆದ್ದರಿಂದ ಮುಂದಿನ ದಿನಗಳಲ್ಲಿ ಪಾಲಿಕೆ ಮೇಯರ್, ಉಪ ಮೇಯರ್ ಹಾಗೂ ಸದಸ್ಯರು ತಂಡಗಳನ್ನು ರಚಿಸಿಕೊಂಡು ಪ್ರವಾಸ ಮಾಡಿ ನನಗೆ ವರದಿ ನೀಡುವಂತೆ ಸೂಚಿಸಿದ್ದೇನೆ ಎಂದು ಹೇಳಿದರು.

ಮಹಾನಗರ ಪಾಲಿಕೆ ಆರೋಗ್ಯ ನಿರೀಕ್ಷಕರು ಜವಾಬ್ದಾರಿಯಿಂದ ಕೆಲಸ ಮಾಡಿಲ್ಲ. ಸಿಬ್ಬಂದಿ ಇಲ್ಲದ ನೆಪ ಹೇಳುತ್ತಿದ್ದಾರೆ. ಆದ್ದರಿಂದ ಅವರಿಗೆ ಸಮರ್ಪಕವಾಗಿ ಕರ್ತವ್ಯ ನಿರ್ವಹಿಸುವಂತೆ ಹೇಳಿದ್ದೇನೆ.

ಸ್ಮಾರ್ಟ್ ಸಿಟಿ ಮಾಡುವ ಪ್ರಧಾನಿ ನರೇಂದ್ರ ಮೋದಿ ಅವರ ಕನಸನ್ನು ನನಸು ಮಾಡುವ ಉದ್ದೇಶದಿಂದ ಇದೇ ರೀತಿ ಪ್ರತಿ ತಿಂಗಳೂ ಪ್ರವಾಸ ಮಾಡುವ ಆಲೋಚನೆ ಇದೆ. ಪಾಲಿಕೆ ಮೇಯರ್ ಹಾಗೂ ಸದಸ್ಯರೂ ಸಹ ಈ ರೀತಿ ಪ್ರವಾಸ (2ನೇ ಪುಟಕ್ಕೆ)

### ಎಲ್ಲೆಂದರಲ್ಲಿ ಕಸ ಕಂಡು ಸಿಡಿಮಿಡಿಗೊಂಡ ಸಂಸದ

ಸ್ಮಾರ್ಟ್ ಕಾಮಗಾರಿಗಳ ವೀಕ್ಷಣೆ ಸಂದರ್ಭದಲ್ಲಿ ಎಲ್ಲೆಂದರಲ್ಲಿ ಕಸ ಬಿದ್ದಿರುವುದನ್ನು ಕಂಡ ಸಂಸದರು ಪಾಲಿಕೆ ಆಡಳಿತದ ಕಾರ್ಯವೈಖರಿ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಸ್ಥಳದಲ್ಲಿಯೇ ಪಾಲಿಕೆ ಆರೋಗ್ಯ ನಿರೀಕ್ಷಕರುಗಳನ್ನು ತರಾಟೆಗೆ ತೆಗೆದುಕೊಂಡು, ಸ್ವಚ್ಛತೆಗೆ ಆದ್ಯತೆ ನೀಡುವಂತೆ ತಾಕೀತು ಮಾಡಿದರು. ಕಸ ನಿನ್ನೆಯದು ಎಂಬ ಆಹಾರ ನಿರೀಕ್ಷಕರ ಹಾರಿಕೆ ಉತ್ತರಕ್ಕೆ ಸಿಡಿಮಿಗೊಂಡ ಸಂಸದರು, (2ನೇ ಪುಟಕ್ಕೆ)

### 2 ಬಸ್ 10ಕ್ಕೂ ಹೆಚ್ಚು ಕಾರುಗಳು

ಸಂಸದರು, ಅಧಿಕಾರಿಗಳು ಹಾಗೂ ಪಾಲಿಕೆ ಸದಸ್ಯರು ಬಸ್‌ನಲ್ಲಿಯೇ ವೀಕ್ಷಣೆಗೆ ಆಗಮಿಸಿದ್ದರು ಜೊತೆಗೆ ಮಾಧ್ಯಮದವರನ್ನು ಹೊತ್ತೊಯ್ದ ಒಂದು ಬಸ್ ಮತ್ತು ಅಧಿಕಾರಿಗಳು ಹಾಗೂ ಪಾಲಿಕೆ ಸದಸ್ಯರ ಹತ್ತಕ್ಕೂ ಹೆಚ್ಚು ಕಾರುಗಳು ಬಸ್ ಹಿಂಬಾಲಿಸುತ್ತಿದ್ದವು. ಬೆಳಿಗ್ಗೆಯೇ ಇಷ್ಟೊಂದು ಸಂಖ್ಯೆಯ ವಾಹನಗಳು, ಅಧಿಕಾರಿಗಳ ದಂಡನ್ನು ಜನತೆ ಕುತೂಹಲದಿಂದ ವೀಕ್ಷಿಸುತ್ತಿತ್ತು. (2ನೇ ಪುಟಕ್ಕೆ)

# ಸಂತ್ರಸ್ತೆ ಸತತ ವಿಚಾರಣೆ, ಆರೋಪಿಗೆ ತಲೆಮರೆಸಿಕೊಳ್ಳುವ ತಂತ್ರ: ಕಾಂಗ್ರೆಸ್

ಬೆಂಗಳೂರು, ಏ. 5 - ಸಿ.ಡಿ. ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಸರಣಿ ಟ್ವೀಟ್ ಸಮರ ಮುಂದುವರೆದಿದ್ದು, ಕಾಂಗ್ರೆಸ್ ತನ್ನ ಟ್ವೀಟ್‌ನಲ್ಲಿ, ಸಿ.ಡಿ. ಪ್ರಕರಣದಿಂದ ಚಳಿ ಜ್ವರ ಬಂದಿರುವ ಆರೋಪಿಗೆ (ರಮೇಶ್ ಜಾರಕಿಹೊಳಿ) ನಿಜಕ್ಕೂ ಅನಾರೋಗ್ಯವೋ ಅಥವಾ ತಲೆಮರೆಸಿಕೊಳ್ಳುವ ತಂತ್ರವೋ? ಎಂದು ಕೇಳಿದೆ.

ಆರೋಪಿ ತಲೆಮರೆಸಿಕೊಳ್ಳುವ ಬಗ್ಗೆ ಪೊಲೀಸರೂ ತಲೆ ಕೆಡಿಸಿಕೊಂಡಿಲ್ಲ, ಆರೋಪಿಯ ಮೊಬೈಲ್ ಅನ್ನು ಹಲವು ದಿನಗಳವರೆಗೆ ಪೊಲೀಸರು ವಶಪಡಿಸಿಕೊಂಡಿಲ್ಲ, ಸಾಕ್ಷ್ಯ ನಾಶಕ್ಕೆ ಸಾಕಷ್ಟು ಸಮಯ ಬೇಕಿತ್ತೋ ಏನೋ! ರಮೇಶ್ ಜಾರಕಿಹೊಳಿ ಅತ್ಯಾಚಾರ ಆರೋಪ ಪ್ರಕರಣವೊಂದೇ ಸಾಕು ಬಿಜೆಪಿ ಆಡಳಿತದ ನಿಜ ಬಣ್ಣ ತಿಳಿಯಲು ಎಂದು ಕಾಂಗ್ರೆಸ್ ಲೇವಡಿ ಮಾಡಿದೆ.

ದೂರು ನೀಡಿದ ಸಂತ್ರಸ್ತೆಯನ್ನು ಆರೋಪಿಯಂತೆ ಸತತವಾಗಿ ವಿಚಾರಣೆಗೆ ಒಳಪಡಿಸಲಾಗುತ್ತಿದೆ, ಆರೋಪಿಗೆ ರಾಜ ಮರ್ಯಾದೆಯಲ್ಲಿ ನೆಪ ಮಾತ್ರದ ವಿಚಾರಣೆ ನಡೆಯುತ್ತಿದೆ, ವಿಚಾರಣೆಗೆ ಕರೆಸಿ ಹಿಂಬಾಗಿಲ ಮೂಲಕ ಕಳಿಸಿಕೊಡುತ್ತಾರೆ ಪೊಲೀಸರು. ಸಂತ್ರಸ್ತೆಗೆ ವಿಶ್ರಾಂತಿ ನೀಡದೆ ಸತತ ವಿಚಾರಣೆ ನಡೆಸುತ್ತಾರೆ, ಸಂತ್ರಸ್ತೆಯನ್ನು ಕಾಡಿಸಿ ಮಹಜರು ನಡೆಸಲಾಗುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಇಲ್ಲಿ ಎಲ್ಲವೂ ಉಲ್ಟಾ, ದೂರು ನೀಡಿದ ಸಂತ್ರಸ್ತೆಯನ್ನೇ ಆರೋಪಿ ಎನ್ನುವಂತೆ ನಡೆಸಿಕೊಳ್ಳಲಾಗುತ್ತಿದೆ. ಆರೋಪಿಯ ಕುಟುಂಬದ ವಿಚಾರಣೆ ಮಾಡುವ ಬದಲಿಗೆ ಸಂತ್ರಸ್ತೆಯ ಕುಟುಂಬದ ವಿಚಾರಣೆ ನಡೆಯುತ್ತಿದೆ.

ಆರೋಪಿ ದೂರಿನಲ್ಲಿ ಸಂತ್ರಸ್ತೆ ಹೆಸರಿಲ್ಲದಿದ್ದರೂ ಯುವತಿಯನ್ನು ಆರೋಪಿ ಎಂಬಂತೆ ನಡೆಸಿಕೊಳ್ಳಲಾಗುತ್ತಿದೆ. ಸಂತ್ರಸ್ತೆ ದೂರಿನಲ್ಲಿ ಆರೋಪಿ ಹೆಸರು ಉಲ್ಲೇಖವಿದ್ದರೂ ಬಂಧನವಿಲ್ಲ, ಸಮರ್ಪಕ ವಿಚಾರಣೆಯೂ ಇಲ್ಲ. ಆರೋಪಿಯನ್ನು ಚುನಾವಣಾ ಪ್ರಚಾರಕ್ಕೆ ಸ್ವತಃ ಮುಖ್ಯಮಂತ್ರಿಯೇ ಕರೆಯುತ್ತಾರೆ, ಅವರದು ತಪ್ಪಿಲ್ಲ ಎಂದು ಕ್ಲೀನ್ ಚಿಟ್ ನೀಡುತ್ತಾರೆ. (2ನೇ ಪುಟಕ್ಕೆ)

### ಡಿಕೆಶಿ ಮೌನದ ಬಗ್ಗೆ ಬಿಜೆಪಿ ಪ್ರಶ್ನೆ

### ಉದ್ಯಮಿ, ಪ್ರಭಾವಿ ರಾಜಕಾರಣಿ ಜೊತೆ ಯುವತಿ ಸಂಪರ್ಕ

ಬೆಂಗಳೂರು, ಏ. 5 - ಮಾಜಿ ಸಚಿವ ರಮೇಶ್ ಜಾರಕಿಹೊಳಿ ರಾಸಲೀಲೆ ಸಿ.ಡಿ. ಪ್ರಕರಣದ ಯುವತಿ, ಮೈಸೂರಿನ ಇಬ್ಬರು ರಾಜಕಾರಣಿ ಮತ್ತು ಉದ್ಯಮಿಗಳ ಜೊತೆಯೂ ಸಂಪರ್ಕ ಹೊಂದಿರುವುದನ್ನು ಎಸ್‌ಐಟಿ ತನಿಖಾ ತಂಡ ಪತ್ತೆ ಹಚ್ಚಿದೆ.

ಜಾರಕಿಹೊಳಿ ಅಲ್ಲದೆ, ಕಾಂಗ್ರೆಸ್‌ನ ಮಾಜಿ ಸಚಿವ ಡಿ. ಸುಧಾಕರ್ ಜೊತೆ ಸಂಪರ್ಕದಲ್ಲಿ ಇದ್ದುದನ್ನು ಪತ್ತೆ ಹಚ್ಚಿರುವ ಅಧಿಕಾರಿಗಳು, ಮೈಸೂರಿನ ಖ್ಯಾತ ಉದ್ಯಮಿ ಹಾಗೂ ಪ್ರಭಾವಿ ರಾಜಕಾರಣಿ ಜೊತೆಯೂ ಯುವತಿ ಸಂಪರ್ಕದಲ್ಲಿದ್ದುದು ತನಿಖೆಯಿಂದ ಪತ್ತೆ ಹಚ್ಚಿದ್ದಾರೆ. ಯುವತಿಯ ಸ್ನೇಹಿತರು ಈ ರಾಜಕಾರಣಿಯಿಂದ ಲಾಭ ಪಡೆಯುವ ಯತ್ನ ಮಾಡಿದ್ದರು, ಆದರೆ ಅದಕ್ಕೆ ಅವರು (2ನೇ ಪುಟಕ್ಕೆ)

# ಕನ್ನಡ ಹೆಚ್ಚು ಬಳಸಿ ಶ್ರೀಮಂತಗೊಳಿಸಿ

## ರಾಷ್ಟ್ರೀಯ ಪತ್ರಕರ್ತರ ಒಕ್ಕೂಟದ ಅಧ್ಯಕ್ಷ ಮಲ್ಲಿಕಾರ್ಜುನಯ್ಯ ಕರೆ



ದಾವಣಗೆರೆ, ಏ. 5 - ಕನ್ನಡ ಬೆಳೆಸುವುದು ಕೇವಲ ಸರ್ಕಾರದಿಂದ ಸಾಧ್ಯವಿಲ್ಲ. ನಾಡಿನ ಜನರು ಕನ್ನಡವನ್ನು ಹೆಚ್ಚು ಬಳಸುವ ಮೂಲಕ ಬೆಳೆಸಬೇಕು ಹಾಗೂ ಶ್ರೀಮಂತಗೊಳಿಸಬೇಕು ಎಂದು ರಾಷ್ಟ್ರೀಯ ಪತ್ರಕರ್ತರ ಒಕ್ಕೂಟದ ಅಧ್ಯಕ್ಷ ಹಾಗೂ ಕನ್ನಡಪ್ರಭ ಸಂಪಾದಕ ಬಿ.ವಿ. ಮಲ್ಲಿಕಾರ್ಜುನಯ್ಯ ತಿಳಿಸಿದ್ದಾರೆ.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ನಗರದ ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ಇಂದು ಆಯೋಜಿಸಲಾಗಿದ್ದ 'ಬರವಣಿಗೆಯಲ್ಲಿ ಸರಿಗನ್ನಡ ಅಭಿಯಾನ' ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಬೆಂಗಳೂರಿನಲ್ಲಿ ಕನ್ನಡಿಗರು ಶೇ.23ರಷ್ಟು ಹಾಗೂ ಕನ್ನಡ ಮಾತನಾಡುವವರು ಕೇವಲ ಶೇ.21ರಷ್ಟಿದ್ದಾರೆ. ಕನ್ನಡ ಉಳಿಯ ಬೇಕಾದರೆ, ಬೇರೆ ರಾಜ್ಯಗಳಿಂದ ಬರುವವರ ಭಾಷೆಗಳನ್ನು ನಾವು ಆಡುವ ಬದಲು, ಬಂದವರೇ ಕನ್ನಡ ಕಲಿಯುವಂತೆ ಮಾಡಬೇಕು. ನಾವು ಕನ್ನಡದಲ್ಲೇ ಮಾತನಾಡಿದರೆ, ಹೊರ ರಾಜ್ಯದವರು ಅನಿವಾರ್ಯವಾಗಿ ಕನ್ನಡ ಕಲಿಯುತ್ತಾರೆ ಎಂದರು.

ವಿಧಾನಸೌಧದಿಂದ ಹಿಡಿದು ಬ್ಯಾಂಕ್, ಸರ್ಕಾರಿ ಕಚೇರಿಗಳು ಹಾಗೂ ನ್ಯಾಯಾಲಯಗಳಲ್ಲಿ ಕನ್ನಡ ಜಾರಿಗೆ ತರುವ ಪ್ರಯತ್ನಗಳು ನಡೆಯುತ್ತಿವೆ. ಇದಕ್ಕೆ ಜನರ ಪ್ರೋತ್ಸಾಹ ಬೇಕು ಎಂದವರು ಹೇಳಿದರು.

ಉಪನ್ಯಾಸ ನೀಡಿ ಮಾತನಾಡಿದ ಹಿರಿಯ ಜಾನಪದ ತಜ್ಞ ಡಾ. ಎಂ.ಜಿ. ಈಶ್ವರಪ್ಪ, ಸರಿಯಾಗಿ ಕನ್ನಡ ಮಾತನಾಡದೇ ಹೋದರೆ 'ಸಿರಿಗನ್ನಡಂ ಗೆಲ್ಗೆ' ಬದಲು 'ಸಿರಿಗನ್ನಡಂ ಗಲ್ಲಿಗೆ' ಆಗುತ್ತದೆ. ಕನ್ನಡ ವರ್ಣಮಾಲೆ ವೈಜ್ಞಾನಿಕವಾಗಿದ್ದು, ಇದನ್ನು ಸರಿಯಾಗಿ ಕಲಿಯಬೇಕು ಎಂದು ತಿಳಿಸಿದರು.

ಪಂಪನಿಂದ ಹಿಡಿದು ಕುವೆಂಪುವರೆಗೆ ಅನೇಕ ಸಾಹಿತಿಗಳು ಕನ್ನಡಕ್ಕೆ ನೀಡಿರುವ (2ನೇ ಪುಟಕ್ಕೆ)

## ರಫೇಲ್ : ಮಧ್ಯವರ್ತಿಗಳಿಗೆ ಹಣ ಕೊಟ್ಟ ತನಿಖೆಗೆ ಆಗ್ರಹ



ನವದೆಹಲಿ, ಏ. 5 - ರಫೇಲ್ ವಿಮಾನ ಉತ್ಪಾದಿಸುವ ಡಸಾಲ್ಟ್ ಕಂಪನಿಯು ಮಧ್ಯವರ್ತಿಗಳಿಗೆ 1.1 ದಶಲಕ್ಷ ಯೂರೋ ನೀಡಿದೆ ಎಂದು ಫ್ರಾನ್ಸ್ ಮಾಧ್ಯಮವೊಂದು ವರದಿ ಮಾಡಿರುವ ಬಗ್ಗೆ ತನಿಖೆ ನಡೆಸಬೇಕು ಹಾಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಉತ್ತರಿಸಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ. (3ನೇ ಪುಟಕ್ಕೆ)


### ತುಳಸಿರಾಮ್ ಅವರಿಗೆ ಪತ್ನಿ ವಿಯೋಗ



ದಾವಣಗೆರೆ ವಿಜಯಲಕ್ಷ್ಮಿ ರಸ್ತೆ ವಾಸಿ ವರ್ತಕರಾದ ತುಳಸಿರಾಮ್ ಜಾಂಗೀಡ್ ಅವರ ಧರ್ಮಪತ್ನಿ **ಶ್ರೀಮತಿ ಲೀಲಾದೇವಿ** ಅವರು ದಿನಾಂಕ 5.4.2021ರ ಸೋಮವಾರ ರಾತ್ರಿ 10.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 62 ವರ್ಷ ವಯಸ್ಸಾಗಿತ್ತು.

ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 6.4.2021ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಜೈನ್ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ

**ಅರವಿಂದ ಮೆಟಲ್ಸ್,** ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
ಮೊ. : 94482-93012, 94482-93015


## ಕೊರೊನಾ : ಶಿರಡಿ ಸಾಯಿಬಾಬಾ ಮಂದಿರ ಬಂದ್



ಶಿರಡಿ,ಏ.5- ಕೊರೊನಾ ಹಿನ್ನೆಲೆಯಲ್ಲಿ ಪ್ರಸಿದ್ಧ ಶಿರಡಿ ಸಾಯಿಬಾಬಾ ದೇವಾಲಯವನ್ನು ಸೋಮವಾರ ರಾತ್ರಿಯಿಂದ ಮುಚ್ಚಲಾಗಿದೆ. ಕೊರೊನಾ ಹಿನ್ನೆಲೆಯಲ್ಲಿ ಧಾರ್ಮಿಕ ಸ್ಥಳಗಳನ್ನು ಮುಚ್ಚುವಂತೆ ತಿಳಿಸಲಾಗಿತ್ತು. ಅದರಂತೆ ಮುಂದಿನ ಆದೇಶದವರೆಗೆ ಸಾಯಿಬಾಬಾ ದೇವಾಲಯ ತೆರೆಯುವುದಿಲ್ಲ. ಆದರೆ, ದೇವಾಲಯದ ಆವರಣದಲ್ಲಿ ಎಂದಿನಂತೆ ದೈನಂದಿನ ಕೆಲಸಗಳನ್ನು ನಿರ್ವಹಿಸಲಾಗುವುದು ಎಂದು ಶ್ರೀ ಸಾಯಿಬಾಬಾ ಸಂಸ್ಥಾನ ಟ್ರಸ್ಟ್ ಮುಖ್ಯಕಾರ್ಯಕಾರಿಣಿ ಅಧಿಕಾರಿ ರವೀಂದ್ರ ಠಾಕ್ರೆ ತಿಳಿಸಿದ್ದಾರೆ.




ಜನನ : 16.09.1953 ಮರಣ : 05.04.2021

### ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 05.04.2021ರಂದು ನಿಧನರಾದ ಬಾಪೂಜಿ ದಂತ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ನಿವೃತ್ತ ಉಪ ಪ್ರಾಂಶುಪಾಲರೂ, ಪ್ರಾಧ್ಯಾಪಕರೂ, ವಿಭಾಗದ ಮುಖ್ಯಸ್ಥರು ಆಗಿದ್ದ

**ಡಾ|| ಡಿ.ಎಸ್. ಮೆಹ್ತಾ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ನಿರ್ದೇಶಕರು, ಬೋಧಕರು-ಬೋಧಕೇತರರು ಹಾಗೂ ವಿದ್ಯಾರ್ಥಿಗಳು
**ಬಾಪೂಜಿ ದಂತ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ದಾವಣಗೆರೆ.**

# ಬಾಪೂಜಿ ಹಾಲ್ ಅಭಿವೃದ್ಧಿ ಬಗ್ಗೆ ಡಿಸಿ ಬಳಿ ಚರ್ಚಿಸಿ, ತೀರ್ಮಾನ



### ಮಲೇಬೆನ್ನೂರು ಪುರಸಭೆಯ ವಿಶೇಷ ಸಭೆಯಲ್ಲಿ ನಿರ್ಧಾರ

ಮಲೇಬೆನ್ನೂರು, ಏ.5- ಪಟ್ಟಣದಲ್ಲಿರುವ ಬಾಪೂಜಿ ಹಾಲ್ ಅಭಿವೃದ್ಧಿ ಪಡಿಸುವ ಕುರಿತು ಚರ್ಚಿಸಿ, ಅನುಮತಿ ಪಡೆಯುವ ಬಗ್ಗೆ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಲು ಇಂದಿನ ಪುರಸಭೆಯ ವಿಶೇಷ ಸಾಮಾನ್ಯ ಸಭೆಯಲ್ಲಿ ನಿರ್ಧರಿಸಲಾಯಿತು.

2019-20 ನೇ ಸಾಲಿನ ಬಾಪೂಜಿ ಹಾಲ್ ದುರಸ್ತಿ ಕಾಮಗಾರಿಯ ಬದಲಾಗಿ, ಬದಲಿ ಕಾಮಗಾರಿ ತೆಗೆದುಕೊಳ್ಳುವ ವಿಚಾರವನ್ನು ಪ್ರಭಾರ ಮುಖ್ಯಾಧಿಕಾರಿ ದಿನಕರ್ ಪ್ರಸ್ತಾಪಿಸಿದಾಗ ಸದಸ್ಯ ಬಿ.ಎಂ. ಚನ್ನೇಶ್ ಸ್ವಾಮಿ ಅವರು ಕಾಮಗಾರಿ ಬದಲಿ ಮಾಡುವುದು ಬೇಡ. ಬಾಪೂಜಿ ಹಾಲ್ ಅಭಿವೃದ್ಧಿಗೆ ಈಗಿರುವ ಅನುದಾನದ ಜೊತೆಗೆ ಬೇರೆ ಅನುದಾನವನ್ನು ಹಾಕುವ ಬಗ್ಗೆ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಚರ್ಚಿಸೋಣ ಎಂದರು.

ಆಗ ಸದಸ್ಯ ದಾದಾವಲಿ ಅವರು ಕೇವಲ 9 ಲಕ್ಷ ಅನುದಾನದಲ್ಲಿ ಬಾಪೂಜಿ ಹಾಲ್ ಅಭಿವೃದ್ಧಿ ಸಾಧ್ಯವಿಲ್ಲ. ಶಾಸಕರು, ಸಂಸದರ ಮತ್ತು ವಿಶೇಷ ಅನುದಾನ ಪಡೆದು ಅಭಿವೃದ್ಧಿ ಪಡಿಸೋಣ. ಈಗಿರುವ ಅನುದಾನವನ್ನು ಬೇರೆ ಕೆಲಸಕ್ಕೆ ಬಳಕೆ ಮಾಡೋಣ ಎಂದಾಗ ಇದಕ್ಕೆ ದನಿಗೂಡಿಸಿದ ಸದಸ್ಯ ಎ. ಆರೀಫ್ ಅಲಿ ಅವರು ಬಾಪೂಜಿ ಹಾಲ್‌ನಲ್ಲಿ ನಾನೂ ಓದಿದ್ದೇನೆ. ಅದರ ಅಭಿವೃದ್ಧಿ ಬಗ್ಗೆ ನಮಗೂ ಕಳಕಳಿ ಇದೆ. ಮೊದಲು ನಾವು ಆ ಕಟ್ಟಡವನ್ನು ನಮ್ಮ ಸುಪರ್ದಿಗೆ ಪಡೆದು, ನಂತರ ಅನುದಾನ ಹಾಕಿ ಅಭಿವೃದ್ಧಿ ಪಡಿಸೋಣ ಎಂದರು.

ಸದಸ್ಯ ಬಿ. ಸುರೇಶ್ ಮಾತನಾಡಿ, ಬಾಪೂಜಿ ಹಾಲ್ ಅಭಿವೃದ್ಧಿ ಪಡಿಸಿ, ವಿವಿಧ ಕಚೇರಿಗಳ ಸಂಕೀರ್ಣ ಮಾಡಬೇಕು. ಸದಸ್ಯ ಬಿ. ಸುರೇಶ್ ಮಾತನಾಡಿ, ಕಳೆದ 5 ವರ್ಷಗಳಿಂದ ಈ ಕುರಿತು ಚರ್ಚೆ ನಡೆದಿದೆ. ಈಗಾಗಲೇ ಟೆಂಡರ್ ಆಗಿತ್ತು. ಆದರೆ ಡಿಸಿಯವರೇ ಇಷ್ಟು ಕಡಿಮೆ ಅನುದಾನದಲ್ಲಿ ಕೆಲಸ ಆಗಲ್ಲ ಎನ್ನುವ ಕಾರಣ ಹೇಳಿ ಕೆಲಸ ನಿಲ್ಲಿಸಿದ್ದಾರೆ ಎಂಬ ಮಾಹಿತಿ ಇದೆ.

ಪ್ರಭಾರ ಮುಖ್ಯಾಧಿಕಾರಿ ದಿನಕರ್ ಅವರು, ನಾನು ಅಧಿಕಾರ ವಹಿಸಿಕೊಂಡು 15 ದಿನಗಳಾಗಿವೆ. ಸದಸ್ಯರು ಕೇಳುವ ಎಲ್ಲಾ ಮಾಹಿತಿಗಳನ್ನು ನೀಡಲು ಸಿದ್ಧರಿದ್ದೇವೆ ಎಂದು ಉತ್ತರ ನೀಡಿದರು.

ಇದರ ಮಧ್ಯೆ ಹಿರಿಯ ಸದಸ್ಯ ಮಾಸಣಗಿ ಶೇಖರಪ್ಪ ಅವರು 5 ವರ್ಷಗಳಿಂದ ಹೇಳಿಕೊಳ್ಳುವಂತಹ ಒಂದೂ ಕೆಲಸವನ್ನು ನಾವು ಮಾಡಿಲ್ಲ ಎಂದಾಗ ಸಭೆಯಲ್ಲಿ ಸದಸ್ಯರ ನಡುವೆ ವಾಗ್ವಾದ ನಡೆಯಿತು.

2020-2021 ನೇ ಸಾಲಿನ 15 ನೇ ಹಣಕಾಸು ಯೋಜನೆಯ ಕಾಮಗಾರಿಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಕರೆಯಲು ಮತ್ತು 2015-16 ನೇ ಸಾಲಿನಿಂದ 2019-20ನೇ ಸಾಲಿನವರೆಗೆ 14ನೇ ಹಣಕಾಸಿನ ಅನುದಾನದಲ್ಲಿ ಉಳಿದಿರುವ 21.30 ಲಕ್ಷ ಮೊತ್ತಕ್ಕೆ ಕ್ರಿಯಾ ಯೋಜನೆ ರೂಪಿಸಲು ವಿಶೇಷ ಸಭೆ ಒಪ್ಪಿಗೆ ನೀಡಿತು.

ಬೇರೆ ವಿಷಯ ಪ್ರಸ್ತಾಪ ಮಾಡಲು ಸದಸ್ಯ ಬಿ. ಸುರೇಶ್ ಮುಂದಾದಾಗ ಮುಖ್ಯಾಧಿಕಾರಿ ದಿನಕರ್ ಅವರು ವಿಶೇಷ ಸಭೆಯಲ್ಲಿ 3 ವಿಷಯಗಳಿಗೆ ಮಾತ್ರ ಅವಕಾಶ ಇದೆ. ಮುಂದಿನ ಸಾಮಾನ್ಯ ಸಭೆಯಲ್ಲಿ ಎಸ್‌ಎಫ್‌ಸಿ ಅನುದಾನದ ಬಗ್ಗೆ ಚರ್ಚಿಸೋಣ ಎಂದು ಹೇಳಿ ಸಭೆಯನ್ನು ಮುಗಿಸಿದರು.

ಪುರಸಭೆ ಅಧ್ಯಕ್ಷೆ ಶ್ರೀಮತಿ ಪಾನಿಪೂರಿ ರಂಗನಾಥ್ ಅಧ್ಯಕ್ಷತೆ ವಹಿಸಿದ್ದರು.

ಉಪಾಧ್ಯಕ್ಷೆ ಅಂಜಿನಮ್ಮ ವಿಜಯಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷ ಮಹಾಂತೇಶ್ ಸ್ವಾಮಿ, ಸದಸ್ಯರಾದ ಮಹಾಲಿಂಗಪ್ಪ, ಬರ್ಕತ್ ಅಲಿ, ಸಾಕಮ್ಮ ರವಿಕುಮಾರ್, ಶಶಿಕಲಾ ಕೇಶವಾಚಾರಿ, ನಾಮಿನಿ ಸದಸ್ಯರಾದ ಪಿ.ಆರ್. ರಾಜು, ಜಿ.ಹೆಚ್. ಮಂಜಪ್ಪ, ಟಿ. ವಾಸಪ್ಪ, ಪ್ರೇಮ ಪರಮೇಶ್ವರಪ್ಪ, ಅಧಿಕಾರಿಗಳಾದ ಉಮೇಶ್, ಪ್ರಭು, ಗುರುಪ್ರಸಾದ್, ಶಿವಯೋಗಿ, ಇಮ್ರಾನ್ ಇನ್ನಿತರರಿದ್ದರು.

# ಕಸಾಪ : ಶೇಖರಗೌಡ ಮಾಲಿ ಪಾಟೀಲ ಸ್ಪರ್ಧೆ

ದಾವಣಗೆರೆ, ಏ.5- ಬರುವ ಮೇ 9 ರಂದು ನಡೆಯುವ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿರುವುದಾಗಿ ಕೊಪ್ಪಳ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಶೇಖರಗೌಡ ಮಾಲಿ ಪಾಟೀಲ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಾವು ಅಧ್ಯಕ್ಷರಾಗಿ ಆಯ್ಕೆಯಾದರೆ, ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಸಂಘ, ಸಂಸ್ಥೆಗಳು ಹಾಗೂ ಸರ್ಕಾರದ ನೆರವಿನ ಮೂಲಕ ಕನ್ನಡ ಸಾಹಿತ್ಯ ಭವನ ನಿರ್ಮಿಸಲಾಗುವುದು. ಪ್ರತಿವರ್ಷ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ವಿವಿಧ ಸಾಹಿತ್ಯ, ಸಾಂಸ್ಕೃತಿಕ ಸಮಾವೇಶ ಆಯೋಜನೆ ಮಾಡಲಾಗುವುದು ಎಂದರು.

ವಚನ ಸಾಹಿತ್ಯ, ದಾಸ ಸಾಹಿತ್ಯ, ನಾಟಕ ಸಾಹಿತ್ಯ, ಮಕ್ಕಳ ಸಾಹಿತ್ಯ ಹಾಗೂ ಕನ್ನಡ ಪರಂಪರೆಯ ಚಿಂತನೆಗಳ ಸಮಾವೇಶ ಆಯೋಜನೆ, ಹಳೆ ಕನ್ನಡ ಹಾಗೂ ಆಧುನಿಕ ಸಾಹಿತ್ಯದ ಮರು ಓದಿಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

ದಾವಣಗೆರೆಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ಶ್ರಮಿಸುವುದಾಗಿಯೂ ಹೇಳಿದ ಅವರು, ರಾಜ್ಯದ ವಿವಿಧೆಡೆ ಉದಯೋನ್ಮುಖ ಬರಹಗಾರರ ಕಮ್ಮಟ, ಶಿಬಿರಗಳನ್ನು ಆಯೋಜಿಸುವುದು ಸೇರಿದಂತೆ ವಿವಿಧ ಯೋಜನೆ ಹಮ್ಮಿಕೊಳ್ಳುವುದಾಗಿ ವಿವರಿಸಿದರು. ಪತ್ರಿಕಾಗೋಷ್ಠಿಯಲ್ಲಿ ಆರ್.ಜಿ. ಹಳ್ಳಿ ನಾಗರಾಜ್, ಸುರೇಂದ್ರ ಉಪಸ್ಥಿತರಿದ್ದರು.

# ಡಾ. ಬಾಬೂಜೀ ಕೊಡುಗೆ ಅಪಾರ



### ಜಗಳೂರಿನಲ್ಲಿ ಶಾಸಕ ಎಸ್.ವಿ.ರಾಮಚಂದ್ರ

ಜಗಳೂರು, ಏ.5 - ದೇಶಕ್ಕೆ ಹಸಿರು ಕ್ರಾಂತಿಯ ಹರಿಕಾರ ಮಾಜಿ ಪ್ರಧಾನಿ ಡಾ|| ಬಾಬು ಜಗಜೀವನ್‌ರಾಮ್ ಅವರ ಕೊಡುಗೆ ಅಪಾರವಾಗಿದೆ ಎಂದು ಶಾಸಕರು ಹಾಗೂ ಎಸ್ಟಿ ಅಭಿವೃದ್ದಿ ನಿಗಮದ ಅಧ್ಯಕ್ಷ ಎಸ್.ವಿ.ರಾಮಚಂದ್ರ ಹೇಳಿದರು.

ತಾಲ್ಲೂಕು ಕಚೇರಿ ಆವರಣದಲ್ಲಿ ಇಂದು ಏರ್ಪಾಡಾಗಿದ್ದ ಡಾ|| ಬಾಬು ಜಗಜೀವನ್‌ರಾಮ್‌ರವರ 114 ನೇ ಜಯಂತಿ ಕಾರ್ಯಕ್ರಮದಲ್ಲಿ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಡಾ|| ಬಾಬು ಜಗಜೀವನ್‌ರಾಮ್ ಅವರು ದೀನ, ದಲಿತರ ಏಳಿಗೆಗಾಗಿ ಶ್ರಮಿಸಿದ್ದಾರೆ. ಈ ದೇಶದ ಪ್ರಗತಿಗಾಗಿ ದುಡಿದಿದ್ದಾರೆ. ಇಂತಹ ಆದರ್ಶ ವ್ಯಕ್ತಿಗಳ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕಿದೆ ಎಂದರು.

ಏಪ್ರಿಲ್ 14 ನೇ ತಾರೀಖು ಬಾಬಾ ಸಾಹೇಬ್ ಅಂಬೇಡ್ಕರ್ ಜಯಂತಿಯಂದು ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಅವರ ಪುತ್ಥಳಿ ನಿರ್ಮಾಣದ ಶಂಕುಸ್ಥಾಪನೆಗೆ ಕೈ ಗೊಳ್ಳುವುದಾಗಿ ಭರವಸೆಯನ್ನು ನೀಡಿದ ಶಾಸಕರು, ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿ ಅತೀ ಬೇಗ ಪೂರ್ಣಗೊಳಿ ಸುವ ಸತತ ಪ್ರಯತ್ನದಲ್ಲಿದ್ದೇನೆ.

ಭದ್ರಾ ಮೇಲ್ದಂಡೆ ಶಂಕುಸ್ಥಾಪನೆಗೆ ಪ್ರಧಾನಿಯವರಿಗೂ ಆಹ್ವಾನ ನೀಡಿ ಅವರ ಸಮ್ಮುಖದಲ್ಲಿ ನೆರವೇರಿಸಲಾಗುವುದು ಎಂದರು.

ತಾಲ್ಲೂಕು ಡಿ.ಎಸ್.ಎಸ್. ಅಧ್ಯಕ್ಷ ಸತೀಶ್ ಮಾತನಾಡಿ, ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ತಾಲ್ಲೂಕು ಆಡಳಿತಕ್ಕೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಈ.ಓ. ಮಲ್ಲಾನಾಯ್ಕ್, ತಹಶೀಲ್ದಾರ್ ನಾಗವೇಣಿ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಬಿ. ಮಹೇಶ್ ತಾಲ್ಲೂಕಿನ ವಿವಿಧ ಇಲಾಖೆ ಅನುಷ್ಠಾನ ಅಧಿಕಾರಿಗಳು ಸೇರಿದಂತೆ ಸಮಾಜದ ಎಲ್ಲಾ ಮುಖಂಡರು, ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಸ್ಮಾರ್ಟ್ ಕಾಮಗಾರಿಗಳ ವೇಗ ಹೆಚ್ಚಿಸಲು ತಾಕೀತು

(1ನೇ ಪುಟದಿಂದ) ಮಾಡಿದರೆ ಉತ್ತಮ ಎಂದರು.

ನಗರದಲ್ಲಿ ಹಂದಿ ಹಾವಳಿ ಹೆಚ್ಚಾಗಿದ್ದು, ಶೀಘ್ರ ಹಂದಿಗಳ ಸ್ಥಳಾಂತರಕ್ಕೆ ಜಿಲ್ಲಾಧಿಕಾರಿ ಹಾಗೂ ಪಾಲಿಕೆ ಆಯುಕ್ತರಿಗೆ ಸೂಚಿಸಿದ್ದೇನೆ. 3 ತಿಂಗಳೊಳಗೆ ಸ್ಥಳಾಂತರ ಮಾಡುವುದಾಗಿ ಪಾಲಿಕೆ ಅಧಿಕಾರಿಗಳು ಹೇಳಿದ್ದಾರೆ ಎಂದರು.

ಕುಂದುವಾಡ ಕೆರೆ ಕಾಮಗಾರಿ ವಿರೋಧ ಮಾಡುವವರಿಗೆ ಚರ್ಚೆ ಮಾಡಲು ಇಲ್ಲಿಗೆ ಬರಲು ಹೇಳಿದ್ದೆ. ಆದರೆ ಬಂದಿಲ್ಲ. ಕೇವಲ ಪತ್ರಿಕಾಗೋಷ್ಠಿ ನಡೆಸಿದರೆ ಸಾಲದು. ಚರ್ಚೆ ನಡೆಸಬೇಕು ಎಂದು ಸಂಸದ ಸಿದ್ದೇಶ್ವರ್ ಹೇಳಿದರು.

ಕಾಮಗಾರಿ ವಿರೋಧದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಕೆರೆಯ ನೀರು ಬಸಿಯದಂತೆ ಏರಿಯ ಮೇಲೆ ಪ್ಲಾಸ್ಟಿಕ್ ಹೊದಿಕೆ ಹಾಕಲಾಗುತ್ತದೆ. ನಂತರ ಆದರ ಮೇಲೆ ಮಣ್ಣು ಹಾಕಲಾಗುತ್ತದೆ. ಇದರಿಂದ ಏನೂ ತೊಂದರೆಯಾಗದು ಎಂದು ಸಮರ್ಥಿಸಿಕೊಂಡರು.

ಮಹಾನಗರಪಾಲಿಕೆ ಉಪಮೇಯರ್ ಶಿಲ್ಪ ಜಯಪ್ರಕಾಶ್, ಸದಸ್ಯರಾದ ಪ್ರಸನ್ನಕುಮಾರ್, ಶಿವಪ್ರಕಾಶ್, ರಾಕೇಶ್ ಜಾಧವ್, ಗೀತಾ ದಿಳ್ಳೆಪ್ಪ, ಜಯಮ್ಮ ಶಿವನಗೌಡ ಪಾಟೀಲ, ಮಾಜಿ ಸದಸ್ಯ ದೇವರಮನೆ ಶಿವಕುಮಾರ್, ಕುಮಾರ್, ಆಯುಕ್ತ ವಿಶ್ವನಾಥ್ ಮುದಜ್ಜಿ, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಡಿ. ಮಲ್ಲಾಪುರ, ಎಂಜಿನಿಯರ್ ಸತೀಶ್ ಸೇರಿದಂತೆ ಅಧಿಕಾರಿಗಳು, ಪಾಲಿಕೆ ಸದಸ್ಯರು ಪಾಲ್ಗೊಂಡಿದ್ದರು.

## 400 ಕೋಟಿ ರೂ. ಬಿಡುಗಡೆ, 347 ಕೋಟಿ ರೂ. ಖರ್ಚು

ಸ್ಮಾರ್ಟ್ ಸಿಟಿ ಯೋಜನೆಯಡಿ 1 ಸಾವಿರ ಕೋಟಿ ರೂ.ಗಳ ಪೈಕಿ 400 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, 347 ಕೋಟಿ ರೂ.ಗಳನ್ನು ವಿವಿಧ ಕಾಮಗಾರಿಗಳಿಗೆ ಬಳಕೆ ಮಾಡಿಕೊಳ್ಳಲಾಗಿದೆ ಎಂದು ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಡಿ. ಮಲ್ಲಾಪುರ ಹೇಳಿದರು.

ಶೇ.70ರಷ್ಟು ಅನುದಾನ ಖರ್ಚಾದ ನಂತರ ಎರಡನೇ ಹಂತದಲ್ಲಿ ಹಣ ಬಿಡುಗಡೆಯಾಗಬೇಕಾಗಿತ್ತು. ಆದರೆ, ಕೊರೊನಾ ಕಾರಣದಿಂದ ವಿಳಂಬವಾಗಿದೆ. ಏಪ್ರಿಲ್ ಮೊದಲ ವಾರದಲ್ಲಿ ಹಣ ಬಿಡುಗಡೆಯಾಗುವ ನಿರೀಕ್ಷೆ ಇದೆ. ಪ್ರಸ್ತುತ ಗುತ್ತಿಗೆದಾರರಿಗೆ ನೀಡಲು ಹಣದ ಕೊರತೆ ಇಲ್ಲ ಎಂದು ಸ್ಪಷ್ಟಪಡಿಸಿದರು.

ರೋಲ್ಯಾಂಡ್ ಬರ್ಗರ್ ಅಂತ ರಾಷ್ಟ್ರೀಯ ಸಂಸ್ಥೆ ಪ್ರಪಂಚದ ಆಯ್ದ ನಗರ ಗಳನ್ನು ಸರ್ವೆ ಮಾಡಿ, ಕೆಲವೊಂದು ಮಾನ ದಂಡಗಳ ಮೇಲೆ ರ್‍ಯಾಂಕಿಂಗ್ ಕೊಡಲಾಗಿದೆ. ಅದರಲ್ಲಿ ದಾವಣಗೆರೆಗೆ 15ನೇ ಸ್ಥಾನ ಲಭಿಸಿರುವುದು ಹೆಮ್ಮೆಯ ವಿಚಾರ ಎಂದು ರವೀಂದ್ರ ಡಿ.ಮಲ್ಲಾಪುರ ಹೇಳಿದರು.

ವಿಯನ್ನಾ ನಗರ ಮೊದಲ ಸ್ಥಾನದಲ್ಲಿದ್ದು, ಲಂಡನ್ ಎರಡನೇ ಸ್ಥಾನದಲ್ಲಿದೆ. ಭಾರತದಲ್ಲಿ ಆಯ್ಕೆಯಾಗಿ ರುವ ಏಕೈಕ ನಗರ ದಾವಣಗೆರೆ ಯಾಗಿದ್ದು, 15ನೇ ಸ್ಥಾನದಲ್ಲಿದೆ ಎಂದರು.

ಸ್ಮಾರ್ಟ್ ಸಿಟಿ ಆಯ್ಕೆಗೆ ಯೋಜನೆ ತಯಾರಿ ಮಾಡಿದ ಸಂದರ್ಭದಲ್ಲಿ ಸ್ಮಾರ್ಟ್ ಮೊಬಿಲಿಟಿಗೆ ಸಂಬಂಧಿಸಿದಂತೆ ನಡೆದ ಸಮೀಕ್ಷೆಯಲ್ಲಿ ಈ ಆಯ್ಕೆ ನಡೆದಿದೆ ಎಂದರು.

## ದೂರು ಹೇಳ ಬಂದ ಪಾಲಿಕೆ ಸದಸ್ಯೆ ಪತಿಗೆ ಮಾಸ್ಕ್ ದಂಡ

ಸಂಸದರು ಹಾಗೂ ಜಿಲ್ಲಾಧಿಕಾರಿ ಕಾಮಗಾರಿಗಳ ಪರಿಶೀಲನೆ ವೇಳೆ ಪಾಲಿಕೆ ಸದಸ್ಯರ ಪತಿಯೊಬ್ಬ ಆ ಪ್ರದೇಶದಲ್ಲಿನ ಸಮಸ್ಯೆಗಳ ಬಗ್ಗೆ ವಿವರಿಸಲು ಮುಂದಾ ದರು. ಆ ವ್ಯಕ್ತಿ ಮಾಸ್ಕ್ ಧರಿಸದಿರುವುದನ್ನು ಕಂಡ ಜಿಲ್ಲಾಧಿಕಾರಿ ಅವರಿಗೆ 250 ರೂ. ದಂಡ ವಿಧಿಸುವಂತೆ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು. ಟೀ ಶರ್ಟ್, ಪ್ಯಾಂಟ್, ಜಾಗಿಂಗ್ ಶೂ ಧರಿಸಿ ಬಂದಿದ್ದ ಸಂಸದರು, ಬೆಳಿಗ್ಗೆ 7 ರಿಂದ 12 ರವರೆಗೂ ಯುವ ಕರನ್ನೂ ನಾಚಿಸುವಂತೆ ಚುರುಕಿನಿಂದ ನಡೆದಾಡಿ, ಕಾಮಗಾರಿಗಳನ್ನು ವೀಕ್ಷಿಸಿದರು. ಅದೇ ರೀತಿ ಬಂದಿದ್ದ ಜಿಲ್ಲಾಧಿಕಾರಿಗಳು ಹಾಗೂ ಅಧಿಕಾರಿಗಳ ತಂಡವೂ ಸಂಸದರೊಂದಿಗೆ ಹೆಜ್ಜೆ ಹಾಕುತ್ತಿತ್ತು.

## ಎಲ್ಲೆಂದರಲ್ಲಿ ಕಸ ಕಂಡು ಸಿಡಿಮಿಡಿಗೊಂಡ ಸಂಸದ

**(1ನೇ ಪುಟದಿಂದ) ಇದು ನಿನ್ನೆಯ ಕಸವಲ್ಲ. ಹದಿನೈದು ದಿನಗಳ ಹಿಂದಿನದ್ದು ಅದನ್ನು ನೋಡಿದರೆ ತಿಳಿಯುತ್ತದೆ ಎಂದರು.**

ಇದಕ್ಕೂ ಮುನ್ನ ಹಿಂದೂ ರುದ್ರಭೂಮಿ ಗೇಟ್ ಬಳಿ ಗುಂಡಿ ಇರುವುದನ್ನು ನೋಡಿದಾ ಗಲೂ ಸಹ ಇದು ಬಹುದಿನಗಳಿಂದ ಇರುವ ಗುಂಡಿ. ಇದನ್ನು ಕೂಡಲೇ ಸರಿಪಡಿಸುವಂತೆ ಹೇಳಿದರು. ನಂತರ ಕುಂದುವಾಡ ಕೆರೆ ವೀಕ್ಷಣೆ ನಂತರ ಮತ್ತೊಮ್ಮೆ ಆಹಾರ ನಿರೀಕ್ಷಕರಿಗೆ ಎಚ್ಚರಿಕೆ ನೀಡಿದ ಸಂಸದರು, ಲಭ್ಯವಿರುವ ಸಿಬ್ಬಂದಿ ಬಳಸಿಕೊಂಡು ನಗರದಲ್ಲಿ ಸಮರ್ಪ ಕವಾಗಿ ಕಸ ನಿರ್ವಹಣೆಗೆ ಆದ್ಯತೆ ನೀಡಿ ಸ್ವಚ್ಛತೆ ಕಾಪಾಡ ಬೇಕು. ಈ ವಿಷಯದಲ್ಲಿ ರಾಜಿ ಇಲ್ಲ. ಮುಲಾ ಜಿಲ್ಲದೆ ನಿಮಗೆ ನೋಟೀಸ್ ನೀಡು ತ್ತೇವೆ. ಜೊತೆಗೆ ನಿಮ್ಮ ಬಡ್ತಿ ಕಡಿತಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದು ಹೇಳಿದರು.

## 2 ಬಸ್, 10 ಕಾರುಗಳು

**(1ನೇ ಪುಟದಿಂದ) ಆರಂಭದಲ್ಲಿಯೇ ಅನಗತ್ಯವಾಗಿ ಹಿಂಬಾಲಿಸುತ್ತಿದ್ದ ವಾಹನಗಳನ್ನು ವಾಪಾಸ್ ಕಳುಹಿಸುವಂತೆ ಸಂಸದರು, ಜಿಲ್ಲಾಧಿಕಾರಿಗಳು ಸೂಚಿಸಿದರಾದರು. ಮೆರವಣಿಗೆ ಮುಂದುವರೆದೇ ಇತ್ತು. ಇದರಿಂದಾಗಿ ಹಳೆ ಭಾಗದ ಕೆಲವೆಡೆ ಟ್ರಾಫಿಕ್ ಜಾಮ್ ಆಗುತ್ತಿತ್ತು.**

# ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿಗೆ 17 ರ್‍ಯಾಂಕ್

ದಾವಣಗೆರೆ, ಏ.5 - ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿಗೆ ಈ ಬಾರಿ 5 ಚಿನ್ನದ ಪದಕಗಳೊಂದಿಗೆ 17 ರ್‍ಯಾಂಕ್‌ಗಳು ಲಭಿಸಿವೆ.

ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು 2019-20ನೇ ಸಾಲಿನ ವಿವಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಗೈದಿದ್ದಾರೆ.

**ಬಿ.ಇ. :** ಇಂಡಸ್ಟ್ರೀಯಲ್ ಪ್ರೊಡಕ್ಷನ್ ಮತ್ತು ಇಂಜಿನಿಯರಿಂಗ್ ವಿಭಾಗದಲ್ಲಿ ಅನಿಸ್ ಫಾತಿಮಾ 1ನೇ ರ್‍ಯಾಂಕ್ ಮತ್ತು ಚಿನ್ನದ ಪದಕ , ಕೆ.ಟಿ. ಮಧುಶ್ರೀ 2ನೇ ರ್‍ಯಾಂಕ್, ಎಂ. ಮಧು, 3ನೇ ರ್‍ಯಾಂಕ್, ಆಫ್ರಿನಾ, 4ನೇ ರ್‍ಯಾಂಕ್, ಎ.ದೀಪಕ್ 5ನೇ ರ್‍ಯಾಂಕ್, ಸಿ.ಅರ್ಚನಾ 6ನೇ ರ್‍ಯಾಂಕ್ ಹಾಗೂ ಪಿ.ವಿನಾಯಕ 7ನೇ ರ್‍ಯಾಂಕ್ ಪಡೆದಿದ್ದಾರೆ.

**ಎಂ.ಟೆಕ್:** ಪವರ್ ಸಿಸ್ಟಮ್ ಇಂಜಿನಿಯರಿಂಗ್ ವಿಭಾಗದಲ್ಲಿ ಎಂ.ಬಿ. ಪ್ರಿಯಾ 1ನೇ ರ್‍ಯಾಂಕ್ ಹಾಗೂ ಚಿನ್ನದ ಪದಕ, ಹಸನ್ ಬೀ ಜಮಾದರ್ 1ನೇ ರ್‍ಯಾಂಕ್ ಹಾಗೂ ಚಿನ್ನದ ಪದಕ, ಆದಿತ್ಯ ರಾಯಡ್ 5ನೇ ರ್‍ಯಾಂಕ್, ಆರ್. ಪದ್ಮಾ 5ನೇ ರ್‍ಯಾಂಕ್, ವಿ. ಮನೋಜ್‌ಕುಮಾರ್ 8ನೇ ರ್‍ಯಾಂಕ್, ಎನ್.ಯು.ವಿಜಯ್ ಕುಮಾರ್ 9ನೇ ರ್‍ಯಾಂಕ್, ಕಂಪ್ಯೂಟರ್ ಎಡೆಡ್ ಸ್ಟ್ರಕ್ಚರಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಎಸ್.ಆರ್. ಪೃಥ್ವಿರಾಜ್ 3ನೇ ರ್‍ಯಾಂಕ್, ಎನ್ವರಾನ್‌ಮೆಂಟ್ ಇಂಜಿನಿಯರಿಂಗ್ ವಿಭಾಗದಲ್ಲಿ ಹೆಚ್. ಆರ್. ಮೀನಾಕ್ಷಿ 2ನೇ ರ್‍ಯಾಂಕ್, ಡಿಜಿಟಲ್ ಕಮ್ಯುನಿಕೇಷನ್ ಮತ್ತು ನೆಟ್‌ವರ್ಕಿಂಗ್ ವಿಭಾಗದಲ್ಲಿ ಎ.ಎಸ್. ಬಸವರಾಜ್ 2ನೇ ಹಾಗೂ ರೇವತಿ.ಎಸ್. ನಡುಮನಿ 5ನೇ ರ್‍ಯಾಂಕ್ ಪಡೆದಿದ್ದಾರೆ.

## ಪರೀಕ್ಷೆ ಬಗ್ಗೆ 2 ದಿನಗಳಲ್ಲಿ ನಿರ್ಧಾರ

**(1ನೇ ಪುಟದಿಂದ)** ಪರೀಕ್ಷೆ ಇಲ್ಲದೆ ಬಡ್ತಿ ನೀಡುವುದೇ ಅಥವಾ ಕೇಂದ್ರದ ಸೋಂಕು ನಿಯಂತ್ರಣ ನಿಯಮಗಳನ್ನು ಪಾಲಿಸುವ ಮೂಲಕ ಪರೀಕ್ಷೆ ನಡೆಸಬೇಕೇ ಎಂಬ ಬಗ್ಗೆ ತಾಂತ್ರಿಕ ಸಲಹಾ ಸಮಿತಿ ಅಭಿಪ್ರಾಯ ಕೇಳಲಾಗಿದೆ.

ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳು, ಪೋಷಕರ ಸಂಘಟನೆ ಪ್ರತಿನಿಧಿಗಳು, ಶಿಕ್ಷಣ ತಜ್ಞರು ಹಾಗೂ ಅಧಿಕಾರಿಗಳ ಜೊತೆ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವರು, ಖಾಸಗಿ ಶಿಕ್ಷಣ ಸಂಸ್ಥೆಗಳು ಪರೀಕ್ಷೆ ನಡೆಸಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಒಂದರಿಂದ 5ನೇ ತರಗತಿವರೆಗೆ ಆನ್‌ಲೈನ್ ಪರೀಕ್ಷೆ ಹಾಗೂ 6ರಿಂದ 9ನೇ ತರಗತಿವರೆಗೆ ಈಗಾಗಲೇ ಪರೀಕ್ಷೆಗಳು ನಡೆಯುತ್ತಿವೆ, ಒಂದಲ್ಲದಿದ್ದರೆ, ಎರಡು ಪಾಳಿಯಲ್ಲಿ ಪರೀಕ್ಷೆ ನಡೆಸಲು ಅವಕಾಶ ಕೊಡಿ ಎಂದಿದ್ದಾರೆ.

ಪರೀಕ್ಷೆ ಇಲ್ಲದೆ ತೇರ್ಗಡೆ ಮಾಡಿದರೆ ತರಗತಿಗೆ ಬರುವವರು ಮತ್ತು ತರಗತಿಗೆ ಬರದವರೆಲ್ಲರನ್ನೂ ತೇರ್ಗಡೆ ಮಾಡಬೇಕಾಗುತ್ತದೆ ಎಂದು ಶಾಲೆಗಳವರು ತಿಳಿಸಿದ್ದಾರೆ. ಎಲ್ಲಾ ಅಭಿಪ್ರಾಯಗಳನ್ನು ಕ್ರೋಢೀಕರಿಸಲಾಗಿದೆ, ಸರ್ಕಾರದ ಮಟ್ಟದಲ್ಲಿ ಸಮಾಲೋಚಿಸಿ ತೀರ್ಮಾನ ಕೈಗೊಳ್ಳುವುದಾಗಿ ಸಚಿವರು ಹೇಳಿದ್ದಾರೆ.

## ಪ.ಪಂ.ಮೇಲ್ದರ್ಜೆಗೆ ನ್ಯಾಮತಿ

ದಾವಣಗೆರೆ, ಏ.5- ಜಿಲ್ಲೆಯ ನ್ಯಾಮತಿ ಗ್ರಾಮ ಪಂಚಾಯ್ತಿಯನ್ನು ಸರ್ಕಾರದ ಅಧಿಸೂಚನೆಯಂತೆ ಪಟ್ಟಣ ಪಂಚಾಯ್ತಿ ಪ್ರದೇಶವನ್ನಾಗಿ ಮೇಲ್ದರ್ಜೆಗೇರಿಸಿ ಆದೇಶ ಹೊರಡಿಸಲಾಗಿದೆ.

ಗ್ರಾಮ ಪಂಚಾಯ್ತಿಯಿಂದ ವಿಶಿಷ್ಟ ಪ್ರಭಾರವನ್ನು ಪಡೆದು ಪಟ್ಟಣ ಪಂಚಾಯ್ತಿಯಾಗಿ ಕರ್ತವ್ಯ ನಿರ್ವಹಿಸಲು ಆದೇಶಿಸಿರುವಂತೆ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳಿಗೆ 21-22 ನೇ ಸಾಲಿನಿಂದ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ನಿಗದಿಪಡಿಸಲಾಗಿದ್ದು, ಏ.1 ರಿಂದ ಜಾರಿಗೆ ತರಲಾಗಿದೆ. ಸಾರ್ವಜನಿಕರು ಆಸ್ತಿ ತೆರಿಗೆ ಯನ್ನು ಪಾವತಿಸಿ, ಪಟ್ಟಣದ ಅಭಿವೃದ್ಧಿಗೆ ಸಹಕರಿಸುವಂತೆ ಪ.ಪಂ. ಮುಖ್ಯಾಧಿಕಾರಿಗಳು ಕೋರಿದ್ದಾರೆ.

# ಮೇ ವರೆಗೂ ಕೊರೊನಾ ಪರಿಣಾಮ

**(1ನೇ ಪುಟದಿಂದ)** ಸರ್ಕಾರಿ ಆಸ್ಪತ್ರೆಗಳಲ್ಲಿ ಕೊರೊನಾ ಸೋಂಕಿತರಿಗೆ ಹೆಚ್ಚು ಹಾಸಿಗೆಗಳನ್ನು ಮೀಸಲಿಟ್ಟಿದ್ದೇವೆ, ಇದರೊಂದಿಗೆ ಬೇರೆ ಕಾಯಿಲೆಗಳ ರೋಗಿಗಳ ಪ್ರಮಾಣವೂ ಹೆಚ್ಚುತ್ತಿದೆ.

ಕೇಂದ್ರ ಆರೋಗ್ಯ ಸಚಿವಾಲಯದೊಂದಿಗೆ ಮಾತುಕತೆ ನಡೆಸಿದ ನಂತರ ರಾಜ್ಯಕ್ಕೆ 15 ಲಕ್ಷಕ್ಕೂ ಹೆಚ್ಚು ಲಸಿಕೆ ಡೋಸ್ ನೀಡಿದ್ದು, ಮತ್ತಷ್ಟು ಜನರು ಲಸಿಕೆ ಪಡೆಯಬಹುದಾಗಿದೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

ರಾಜ್ಯದಲ್ಲಿ ನಿನ್ನೆವರೆಗೆ 46,02,000 ಮಂದಿಗೆ ಲಸಿಕೆ ನೀಡಲಾಗಿದೆ, ಇದರಲ್ಲಿ 10 ಲಕ್ಷ ಡೋಸ್ ಬೆಂಗಳೂರಿಗೆ ಹಾಗೂ 5 ಲಕ್ಷ ಡೋಸ್ ಬೆಳಗಾವಿಗೆ ಕಳುಹಿಸಲಾಗಿದೆ. ಹೆಚ್ಚು ಲಸಿಕೆ ಡೋಸ್ ನೀಡಿದ್ದಕ್ಕೆ ಕೇಂದ್ರ ಸರ್ಕಾರಕ್ಕೆ ಧನ್ಯವಾದ ಸಲ್ಲಿಸುವುದಾಗಿ ತಿಳಿಸಿದರು.

ರಜೆ ಕಾರಣ ಸೋಂಕಿತರ ಸಂಖ್ಯೆಯಲ್ಲಿ ಇಳಿಕೆಯಾಗಿದೆ, ಅಲ್ಲದೆ, ಕೋವಿಡ್ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸುವುದರಿಂದ ಇನ್ನಷ್ಟು ಇಳಿಕೆ ಮಾಡಬಹುದಾಗಿದೆ. ಎರಡನೇ ಅಲೆ ನಿಯಂತ್ರಿಸಿ ಜನರ ಜೀವ ಉಳಿಸುವ ಕೆಲಸ ಮಾಡಬೇಕಿದೆ, ಇದಕ್ಕೆ ಎಲ್ಲರ ಸಹಕಾರ ಅಗತ್ಯವಿದೆ ಎಂದು ಮನವಿ ಮಾಡಿದರು.

ಸೋಂಕು ನಿಯಂತ್ರಿಸದಿದ್ದರೆ ಬೆಂಗಳೂರಿನಲ್ಲಿ ದಿನವೊಂದಕ್ಕೆ ಆರೂವರೆ ಸಾವಿರದಷ್ಟು ಸೋಂಕಿತರ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ, ವಿರೋಧ ಪಕ್ಷಗಳ ಸಲಹೆಗಳನ್ನೂ ಪಡೆಯುತ್ತೇವೆ ಎಂದರು.

## ಲಕ್ಷ ಸೋಂಕಿತರು

**(1ನೇ ಪುಟದಿಂದ) ಬಂದ್ :** ಕೊರೊನಾ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮಹಾರಾಷ್ಟ್ರ, ಪಂಜಾಬ್ ಹಾಗೂ ದೆಹಲಿ ಸೇರಿದಂತೆ, ಹಲವಾರು ರಾಜ್ಯಗಳಲ್ಲಿ ಶಾಲೆಗಳನ್ನು ಮುಚ್ಚಲಾಗಿದೆ.

ದೆಹಲಿ, ಗುಜರಾತ್ ಹಾಗೂ ತಮಿಳುನಾಡು ಸೇರಿದಂತೆ ಕೆಲ ರಾಜ್ಯಗಳಲ್ಲಿ ಅನಿರ್ದಿಷ್ಟ ಅವಧಿಗೆ ಶಾಲೆಗಳನ್ನು ಮುಚ್ಚಲಾಗಿದೆ. ಉತ್ತರ ಪ್ರದೇಶ, ರಾಜಸ್ಥಾನ, ಬಿಹಾರ ಹಾಗೂ ಪಂಜಾಬ್ ಸೇರಿದಂತೆ, ಕೆಲ ರಾಜ್ಯಗಳಲ್ಲಿ ಅಲ್ಪ ಅವಧಿಗೆ ಶಾಲೆಗಳನ್ನು ಮುಚ್ಚಲಾಗಿದೆ.

**ವಿದ್ಯಾರ್ಥಿಗಳ ಘರ್ಷಣೆ :** ಬಿಹಾರ ಸರ್ಕಾರ ಶಾಲೆ, ಕಾಲೇಜು ಹಾಗೂ ತರಬೇತಿ ಸಂಸ್ಥೆಗಳನ್ನು ತೆರೆಯುವುದನ್ನು ಒಂದು ವಾರ ಮುಂದೂಡಿದ್ದನ್ನು ವಿರೋಧಿಸಿ ಗುಂಪೊಂದು ಸಸಾರಾಮ್‌ನಲ್ಲಿ ನಡೆ ಸಿದ ಘರ್ಷಣೆಯಲ್ಲಿ ಹಲವು ಪೊಲೀಸರು ಗಾಯ ಗೊಂಡಿದ್ದಾರೆ. ಕೊರೊನಾ ಹಿನ್ನೆಲೆಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆಯುವುದನ್ನು ಮುಂದೂಡಲಾಗಿತ್ತು.

ವಿದ್ಯಾರ್ಥಿಗಳು ಹಾಗೂ ಕೆಲ ಸಮಾಜ ವಿರೋಧಿ ಶಕ್ತಿಗಳು ಸೇರಿಕೊಂಡು ಹಿಂಸಾಚಾರ ನಡೆಸಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಯೊಬ್ಬರು ತಿಳಿಸಿ ದ್ದಾರೆ. ಘಟನೆಗೆ ಸಂಬಂಧಿಸಿದಂತೆ ಹತ್ತಾರು ಜನರನ್ನು ಬಂಧಿಸಲಾಗಿದೆ. ಹಿಂಸಾಚಾರದಲ್ಲಿ ಗಾಯಗೊಂಡ ಆರು ಜನ ಪೊಲೀಸರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

# ಕನ್ನಡ ಹೆಚ್ಚು ಬಳಸಿ ಶ್ರೀಮಂತಗೊಳಿಸಿ

**(1ನೇ ಪುಟದಿಂದ)** ಕೊಡುಗೆ ಬಳಸಿದಷ್ಟೂ ಖಾಲಿಯಾಗದ ತಿಜೋರಿಯಂತಿದೆ. ಇಂತಹ ಭಾಷೆಯನ್ನು ಸರಿಯಾಗಿ ಬಳಸುವುದಷ್ಟೇ ಅಲ್ಲದೇ, ಶರಣರು-ದಾಸರ ಆಶಯದಂತೆ ಸರಿ ಜೀವನವನ್ನು ನಡೆಸಬೇಕು ಎಂದು ಕಿವಿಮಾತು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಇಂದಿನ ಸುದ್ದಿ ಸಂಪಾದಕ ಹಾಗೂ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ವೀರಪ್ಪ ಎಂ. ಬಾವಿ, ಚಿಕ್ಕಂದಿನಿಂದಲೇ ಭಾಷೆಯ ಬಳಕೆ ಸರಿಪಡಿಸಿದರೆ ಮುಂದೆ ತಪ್ಪಾಗುವುದಿಲ್ಲ ಎಂಬ ಉದ್ದೇಶದಿಂದ ವಿದ್ಯಾರ್ಥಿಗಳಿಗೆ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಹಿರಿಯ ಪತ್ರಕರ್ತರೂ ಆದ ಸಾಹಿತಿ ಬಾಮ ಬಸವರಾಜಯ್ಯ, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆ. ಚಂದ್ರಣ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ, ಸಿದ್ಧಗಂಗಾ ವಿದ್ಯಾಸಂಸ್ಥೆ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಜಸ್ಟಿನ್ ಡಿಸೌಜ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಶಸ್ತಿ ಪುರಸ್ಕೃತರುಗಳಾದ ಪೆ.ನಾ. ಗೋಪಾಲರಾವ್, ವರದಿಗಾರ ಯಳನಾಡು ಮಂಜುನಾಥ್ ಅವರುಗಳನ್ನು ಸನ್ಮಾನಿಸಲಾಯಿತು.

ಸಂಘದ ಉಪಾಧ್ಯಕ್ಷ ಹೆಚ್.ಎಂ.ಪಿ. ಕುಮಾರ್ ಸ್ವಾಗತಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಜನತಾವಾಣಿ ಉಪ ಸಂಪಾದಕ ಇ.ಎಂ. ಮಂಜುನಾಥ ಕಾರ್ಯಕ್ರಮ ನಿರೂಪಿಸಿದರು. ಖಜಾಂಚಿ ಮಂಜಪ್ಪ ಮಾಗನೂರು ವಂದಿಸಿದರು.


## ಮಲೇಬೆನ್ನೂರು : ಇಂದು ಬಿಜೆಪಿ ಸಂಸ್ಥಾಪನಾ ದಿನ

ಮಲೇಬೆನ್ನೂರು ಪಟ್ಟಣದ ವಿಶ್ವಕರ್ಮ ಸಮುದಾಯ ಭವನದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಬಿಜೆಪಿ ಸಂಸ್ಥಾಪನಾ ದಿನದ ಅಂಗವಾಗಿ ಮಲೇಬೆನ್ನೂರು ಮಹಾಶಕ್ತಿ ಕೇಂದ್ರ ಉದ್ಘಾಟನೆಗೊಳ್ಳಲಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುವುದನ್ನು ಲೈವ್ ಮೂಲಕ ಪಕ್ಷದ ಕಾರ್ಯಕರ್ತರಿಗೆ ತೋರಿಸುವ ವ್ಯವಸ್ಥೆ ಮಾಡಲಾಗಿದೆ.

ಇದೇ ರೀತಿಯ ಕಾರ್ಯಕ್ರಮಗಳನ್ನು ಕೊಂಡಜ್ಜಿ, ಕುಂಬಳೂರು, ಹೊಳೆಸಿರಿಗೆರೆ, ಭಾನುವಳ್ಳಿಯಲ್ಲೂ ಹಮ್ಮಿಕೊಳ್ಳಲಾಗಿದೆ ಎಂದು ತಾ. ಗ್ರಾ. ಬಿಜೆಪಿ ಕಾರ್ಯದರ್ಶಿ ಆದಾಪುರ ವೀರೇಶ್ ತಿಳಿಸಿದ್ದಾರೆ.


## 14ನೇ ವರ್ಷದ ಪುಣ್ಯಸ್ಮರಣೆ



ಡಿ. ಬಸಪ್ಪನವರು

ನೀವು ನಮ್ಮನ್ನಗಲಿ ಇಂದಿಗೆ

14 ವರ್ಷಗಳಾದವು.

ಸದಾ ನಿಮ್ಮ

ಸ್ಮರಣೆಯಲ್ಲಿರುವ....

ಡಿ. ಬಸಪ್ಪ ಅಂಡ್ ಸನ್ಸ್

ಹಳೆಯ ಮತ್ತು ಹೊಸ ಪುಸ್ತಕದ ವ್ಯಾಪಾರಿಗಳು

ಮಂಡಿಪೇಟೆ, ದಾವಣಗೆರೆ ಮತ್ತು ದೀಟೂರು ವಂಶಸ್ಥರು, ಮಕ್ಕಳು ಮತ್ತು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು. ಮೊ. : 94487 94937


## ಎನ್. ಪ್ರಸಾದ್ ಭಟ್ ನಿಧನ



ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್ ವಾಸಿ ಹಾಗೂ ಶ್ರೀ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನದ ಭಟ್ಟರು ಆದ ಶ್ರೀ ಎನ್. ಪ್ರಸಾದ್ ಭಟ್ಟರು ದಿನಾಂಕ 05.04.2021ರ ಸೋಮವಾರ ಬೆಳಗಿನಜಾವ 3.30ಕ್ಕೆ ವೈಕುಂಠ ವಾಸಿ ಗಳಾಗಿರುತ್ತಾರೆ. ಮೃತರ ಅಂತ್ಯಕ್ರಿಯೆಯನ್ನು ಅಂದೇ ಬೆಳಗ್ಗೆ 11 ಗಂಟೆಗೆ ಪಿ.ಬಿ. ರಸ್ತೆಯ ವೈಕುಂಠ ಧಾಮದಲ್ಲಿ ನೆರವೇರಿಸಲಾಯಿತು. ಮೃತರು ಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

## ರಸ್ತೆ ಅಪಘಾತದಲ್ಲಿ ಅಪರಿಚಿತನಿಗೆ ಗಾಯ



ದಾವಣಗೆರೆ, ಏ.5- ಅಪಘಾತದಲ್ಲಿ ಗಾಯ ಗೊಂಡ ಗಾಯಾಳು ಅಪರಿಚಿತ ವ್ಯಕ್ತಿಯ ಪತ್ತೆಗೆ ಉತ್ತರ ಸಂಚಾರ ಪೊಲೀಸ್ ಠಾಣೆ ಪಿಎಸ್‌ಐ ಮನವಿ ಮಾಡಿದ್ದಾರೆ. ನಿನ್ನೆ ರಾತ್ರಿ ದಾವಣಗೆರೆ ಕಡೆಯಿಂದ ಚಿತ್ರದುರ್ಗಕ್ಕೆ ಹೊರಟಿದ್ದ ಬೈಕ್ ಡಿಕ್ಕಿ ಹೊಡೆದ ಪರಿಣಾಮ ತೀವ್ರ ಗಾಯಗೊಂಡಿದ್ದ ಪಾದಚಾರಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ವ್ಯಕ್ತಿಯ ಹೆಸರು, ವಿಳಾಸ ಗೊತ್ತಿರುವುದಿಲ್ಲ. 25 ವರ್ಷದ, ಕೋಲು ಮುಖ, ತೆಳುವಾದ ಮೈಕಟ್ಟು, ಗೋದಿ ಮೈ ಬಣ್ಣ, ಜೀನ್ಸ್ ಪ್ಯಾಂಟ್-ಶರ್ಟ್ ಧರಿಸಿರುವ ಈತನ ಪತ್ತೆಗೆ ಮನವಿ ಮಾಡಿದ್ದಾರೆ.

# ಆರೋಪಿಗೆ ತಲೆಮರೆಸಿಕೊಳ್ಳುವ ತಂತ್ರ: ಕಾಂಗ್ರೆಸ್

**(1ನೇ ಪುಟದಿಂದ)** ಹಲವು ಸಚಿವರು ನಾವೆಲ್ಲ ಆರೋಪಿ ಬೆಂಬಲಕ್ಕಿದ್ದೇವೆ ಎಂದು ಹೇಳುತ್ತಾರೆ. ಇದೆಲ್ಲವೂ ಆರೋಪಿ ಯನ್ನು ರಕ್ಷಿಸಲಾಗುತ್ತಿದೆ ಎಂಬುದಕ್ಕೆ ನಿದರ್ಶನವಾಗಿದೆ ಎಂದು ಕಾಂಗ್ರೆಸ್ ಟ್ವೀಟ್ ಮಾಡಿದೆ.

ಇನ್ನೊಂದೆಡೆ ಟ್ವೀಟ್ ಮಾಡಿರುವ ಬಿಜೆಪಿ, ಸದನದಲ್ಲಿ ಸಿಡಿ ಪ್ರಕರಣ ಪ್ರಸ್ತಾಪಿಸುವಾಗ ಡಿ.ಕೆ. ಶಿವಕುಮಾರ್ ಹೆಸರು ಪ್ರಕರಣದಲ್ಲಿ ಪ್ರಸ್ತಾಪವಾಗಿರಲಿಲ್ಲ. ಹೀಗಾಗಿ ಸದನದಲ್ಲಿ ಡಿಕೆಶಿ ಹಾಗೂ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ರೋಷಾವೇಶ ಪ್ರದರ್ಶಿಸಿದ್ದರು. ಈಗ ಷಡ್ಯಂತ್ರದಲ್ಲಿ ಡಿಕೆಶಿ ಹೆಸರು ಕೇಳಿ ಬರುತ್ತಿದೆ, ಡಿಕೆಶಿ ಮೌನವಾಗಿದ್ದಾರೆ, ಸಿದ್ದರಾಮಯ್ಯ ಮತ್ತೆ ಮತ್ತೆ ಕೆದಕುತ್ತಿದ್ದಾರೆ ಎಂದು ಹೇಳಿದೆ.

## ಪ್ರಭಾವಿ ರಾಜಕಾರಣಿ ಜೊತೆ ಯುವತಿ ಸಂಪರ್ಕ

**(1ನೇ ಪುಟದಿಂದ)** ಜಗ್ಗಿರಲಿಲ್ಲ ಎನ್ನಲಾಗುತ್ತಿದೆ. ಒಟ್ಟಾರೆ ಯುವತಿ ಜಾರಕಿಹೊಳಿ, ಸುಧಾಕರ್ ಸೇರಿದಂತೆ ನಾಲ್ವರು ಪ್ರಭಾವಿಗಳ ಜೊತೆ ಸಂಪರ್ಕದಲ್ಲಿದ್ದುದಲ್ಲದೆ, ಆಗಾಗ್ಗೆ ದೂರವಾಣಿ ಮೂಲಕ ಸಂಭಾಷಣೆ ನಡೆಸಿದ್ದಾರೆ. ರಾಸಲೀಲೆ ಪ್ರಕರಣ ದಿನದಿಂದ ದಿನಕ್ಕೆ ಹೊಸ ತಿರುವು ಪಡೆಯುತ್ತಿದ್ದು, ಆಕೆಯ ಜೊತೆ ಸಂಪರ್ಕದಲ್ಲಿದ್ದ ಪ್ರಭಾವಿಗಳಿಗೆ ನೋಟಿಸ್ ನೀಡಿ, ವಿಚಾರಣೆಗೆ ಒಳಪಡಿಸುವ ಸಾಧ್ಯತೆ ಇದೆ.


ಈ ಮಧ್ಯೆ ರಾಸಲೀಲೆಯ ಪ್ರಮುಖ ಆರೋಪಿ ರಮೇಶ್ ಜಾರಕಿಹೊಳಿ ಅವರಿಗೆ ಕೊರೊನಾ ಸೋಂಕು ತಗುಲಿದ್ದು, ಅವರನ್ನು ಗೋಕಾಕ್‌ನ ತಾಲ್ಲೂಕು ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿರಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ರಮೇಶ್ ಅವರು ಕಳೆದ 2ರಂದೇ ಎಸ್‌ಐಟಿ ಮುಂದೆ ಹಾಜರಾಗಿ ವಿಚಾರಣೆಗೆ ಒಳಪಡಬೇಕಿತ್ತು.

ಅನಾರೋಗ್ಯದ ನೆಪ ಒಡ್ಡಿ ಅಂದು ತನಿಖೆಯಿಂದ ದೂರ ಉಳಿದಿದ್ದರು, ಇದೀಗ ಅವರಿಗೆ ಕೊರೊನಾ ಸೋಂಕು ತಗುಲಿರುವುದರಿಂದ ಇನ್ನು ಕೆಲ ದಿನಗಳ ಕಾಲ ಅವರ ವಿಚಾರಣೆ ಸಾಧ್ಯವಾಗದು.

# ಅಸ್ಪೃಶ್ಯತೆ ನಿವಾರಣೆಗೆ ಸಂಕಲ್ಪ ಅಗತ್ಯ

## ಸಮಾಜ ಕಲ್ಯಾಣ ಸಹಾಯಕ ನಿರ್ದೇಶಕ ಮಹೇಶ್ವರಪ್ಪ ಅಭಿಮತ




ಜಗಳೂರು, ಏ.5- ಅಸ್ಪೃಶ್ಯತೆ ಆಚರಿಸಿದಲ್ಲಿ ಕಠಿಣ ಕಾನೂನು ಕ್ರಮಗಳು ಜಾರಿಯಲ್ಲಿದ್ದರೂ ಇಂದಿಗೂ ಅಸ್ಪೃಶ್ಯತೆ ಜೀವಂತವಾಗಿರುವುದು ವಿಷಾದನೀಯ. ಅದರ ನಿವಾರಣೆಗಾಗಿ ಸಂಕಲ್ಪ ಅಗತ್ಯ ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ ಅಭಿಪ್ರಾಯಪಟ್ಟರು.

ಪಟ್ಟಣದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಸಾಧನ ಕಲಾತಂಡ ಇವರುಗಳ ಸಂಯುಕ್ತಾಶ್ರದಲ್ಲಿ ಹಮ್ಮಿಕೊಂಡಿದ್ದ ಅಸ್ಪೃಶ್ಯತಾ ನಿವಾರಣಾ ಸಪ್ತಾಹ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.


ಆಂದೋಲನದ ಮೂಲಕ ಜಾಗೃತಿ ಮೂಡಿಸಿದಾಗ ಮಾತ್ರ ಅಸ್ಪೃಶ್ಯತೆ ತೊಲಗಿಸಲು ಸಾಧ್ಯ. ಸಾಮಾಜಿಕ ಕಾರ್ಯಕ್ರಮಗಳನ್ನು ವೈಜ್ಞಾನಿಕ ದೃಷ್ಟಿಕೋನದಿಂದ ನೋಡಿದಾಗ ಮಾತ್ರ ಸಮಾಜಕ್ಕೆ ಅಂಟಿಕೊಂಡಿರುವ ಅಸ್ಪೃಶ್ಯತೆ, ಜಾತಿ ಪದ್ಧತಿ ಕಳಂಕಗಳನ್ನು ಹೋಗಲಾಡಿಸಬಹುದು. ಗ್ರಾಮೀಣ ಭಾಗದಲ್ಲಿ ವಿದ್ಯಾರ್ಥಿ ಯುವ ಸಮೂಹ ಜಾಗೃತರಾಗಿ ಸಂವಿಧಾನದ ಆಶಯಗಳನ್ನು ಈಡೇರಿಸಬೇಕು. ಅಸ್ಪೃಶ್ಯತೆ ನಿವಾರಣೆಗಾಗಿ ಸಂಕಲ್ಪ ಮಾಡಬೇಕು ಎಂದರು.

ದಲಿತ ಸಂಘಟನೆ ಒಕ್ಕೂಟದ ಅಧ್ಯಕ್ಷ ರಾಜಪ್ಪ ವ್ಯಾಸಗೊಂಡನಹಳ್ಳಿ ಮಾತನಾಡಿ, ದಲಿತರ ಮೇಲಿನ ದೌರ್ಜನ್ಯ ನಿರ್ಮೂಲನೆ, ಮಹಿಳೆಯರ ಮೇಲಿನ ಅತ್ಯಾಚಾರ ತಡೆ, ಶೋಷಣೆ ಮುಕ್ತ ಸಮಾಜಕ್ಕೆ ಜಾಗೃತಿ ಅಗತ್ಯ ಎಂದರು.

ಎಐಎಸ್‌ಎಫ್ ರಾಜ್ಯ ಸಹಕಾರ್ಯದರ್ಶಿ ಮಾದಿಹಳ್ಳಿ ಮಂಜಪ್ಪ ಮಾತನಾಡಿ, ದೇಶದಲ್ಲಿ ಶ್ರೇಷ್ಠ ಗ್ರಂಥ ಸಂವಿಧಾನವಾಗಿದ್ದು, ಸಂವಿಧಾನದ ಉಳಿವಿಗಾಗಿ ಪ್ರತಿಯೊಬ್ಬರೂ ಕೈ ಜೋಡಿಸಬೇಕು. ದಲಿತ ಸಮುದಾಯದಲ್ಲಿ ಜನಿಸಿರುವುದು ಶಾಪಗ್ರಸ್ತವಲ್ಲ. ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಜಾತಿಗೆ ಸೀಮಿತಗೊಳಿಸುವುದು ಸರಿಯಲ್ಲ ಎಂದರು. ಈ ಸಂದರ್ಭದಲ್ಲಿ ಪ್ರಭಾರಿ ಪ್ರಾಂಶುಪಾಲ ವಾಮದೇವಪ್ಪ, ಉಪನ್ಯಾಸಕರಾದ ಶಶಿಕಲಾ, ಅಜ್ಜಯ್ಯ, ಸಂತೋಷ್ , ಕಲಾ ತಂಡದ ಪರಶುರಾಮ್, ನಾಗರಾಜ್, ಶಶಿಕಲಾ ಭಾಗವಹಿಸಿದ್ದರು. ಸಾಧನ ಕಲಾ ತಂಡದ ಗ್ಯಾಸ್ ಓಬಣ್ಣ ನೇತೃತ್ವದಲ್ಲಿ ಜಾಗೃತಿ ಗೀತೆಗಳು ಹಾಗೂ ಅಸ್ಪೃಶ್ಯತೆ ನಿವಾರಣೆ ಜಾಗೃತಿ ನಾಟಕ ಅಭಿನಯಿಸಲಾಯಿತು.

# ಜನರ ಕೈಗೆ ಕೆಲಸ ಕೊಡಿ, ನಿರ್ಗತಿಕರಿಗೆ ವಸತಿ ನೀಡಿ

## ಕೂಡ್ಲಿಗಿ : ತಾಲ್ಲೂಕು ಮಟ್ಟದ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕ ಗೋಪಾಲಕೃಷ್ಣ



ಅಭಿವೃದ್ಧಿಯಲ್ಲಿ ಹಿಂದೆ ಬಿದ್ದ ಅಧಿಕಾರಿಗಳಿಗೆ ಶಾಸಕ ಗೋಪಾಲಕೃಷ್ಣ ಮಾತಿನ ಚಾಟಿ ಬೀಸಿ, ಕೆಲಸ ಮಾಡುವಂತೆ ಬಿಸಿ ಮುಟ್ಟಿಸಿದರು. ಗಾಂಧೀಜಿ ಚಿತಾಭಸ್ಮ ಕಾಮಗಾರಿ ನಡೆಸಿದ ನಿರ್ಮಿತಿ ಕಾಮಗಾರಿ ಬಗ್ಗೆ ಶಾಸಕರು ಬೇಸರ ವ್ಯಕ್ತಪಡಿಸಿದರು.

ಕೂಡ್ಲಿಗಿ, ಏ.5- ಉದ್ಯೋಗ ಖಾತ್ರಿ ಯೋಜನೆಯಡಿ ಕೋಟಿ ಕೋಟಿ ಹಣ ಬರುತ್ತದೆ. ಅಧಿಕಾರಿಗಳು ಗ್ರಾಮೀಣ ಭಾಗದ ರೈತರಿಗೆ, ಕೂಲಿ ಕಾರ್ಮಿಕರಿಗೆ ಉದ್ಯೋಗ ನೀಡುವುದರ ಮೂಲಕ ಮಾನವೀಯತೆ ಮೆರೆಯಬೇಕು. ಖಾತ್ರಿ ಯೋಜನೆಯಡಿ ಮೀಸಲಿಟ್ಟ ಹಣ ತಾಲ್ಲೂಕಿನಲ್ಲಿ ಝೀರೋ ಆಗುವ ರೀತಿ ಅಧಿಕಾರಿಗಳು ಆಯಾ ಇಲಾಖೆಗೆ ಬಂದ ಅನುದಾನವನ್ನು ಜನತೆಗೆ ಕೂಲಿ ನೀಡುವುದರ ಮೂಲಕ ನ್ಯಾಯ ಒದಗಿಸಿಕೊಡಬೇಕೆಂದು ಕೂಡ್ಲಿಗಿ ಶಾಸಕ ಎನ್.ವೈ. ಗೋಪಾಲಕೃಷ್ಣ ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಆಯೋಜಿಸಿದ್ದ ತಾಲ್ಲೂಕು ಮಟ್ಟದ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೂಡ್ಲಿಗಿ ತಾಲ್ಲೂಕಿನಲ್ಲಿರುವ ಅಲೆಮಾರಿ ಕುಟುಂಬಗಳಿಗೆ ಸಾವಿರಕ್ಕೂ ಹೆಚ್ಚು ಮನೆಗಳನ್ನು ಮಂಜೂರು ಮಾಡಿಸಿದ್ದು, ಬಿಸಿಎಂ ಅಧಿಕಾರಿಗಳು ಹಾಗೂ ಸಂಬಂಧಿಸಿದ ಸ್ಥಳೀಯ ಆಡಳಿತದ ಅಧಿಕಾರಿಗಳು ನಿವೇಶನ ರಹಿತರಿಗೆ ನಿವೇಶನ ಒದಗಿಸಲು ಮುಂದಾಗಬೇಕು. ನಿವೇಶನ ಇದ್ದವರಿಗೆ ಮನೆ ಕಟ್ಟಿಸಿಕೊಡಲು ಅಧಿಕಾರಿಗಳು ಮುಂದೆ ಬರಬೇಕು. ಈ ಕುರಿತು ವಾರದೊಳಗೆ ಫಲಾನುಭವಿಗಳ ಸ್ಥಿತಿಗತಿಗಳ ಬಗ್ಗೆ ಪಟ್ಟಿ ಮಾಡುವಂತೆ ಬಿಸಿಎಂ ಅಧಿಕಾರಿ ಪಂಪಾಪತಿಯವರಿಗೆ ಶಾಸಕರು ನಿರ್ದೇಶನ ನೀಡಿದರು.

**ಬರಿಯ ಭಾಷಣದಿಂದ ಪ್ರಯೋಜನವಿಲ್ಲ:** ತಾಲ್ಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳು ಸರಿಯಾಗಿ ಕರ್ತವ್ಯ ನಿರ್ವಹಿಸದಿರುವ ಕುರಿತು ಬೇಸರ ವ್ಯಕ್ತಪಡಿಸಿದ ಶಾಸಕರು, ಕಂದಾಯ ಇಲಾಖೆ ಅಧಿಕಾರಿಗಳು ಕೇವಲ ಭಾಷಣ ಮಾಡುವುದರಿಂದ ಸಮಸ್ಯೆಗಳು ಪರಿಹಾರವಾಗುವುದಿಲ್ಲ. ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಸಹಕಾರ ನೀಡುವುದರ ಮೂಲಕ ಜನಪರ ಸಮಸ್ಯೆಗಳನ್ನು ಬಗೆಹರಿಸಲು ಮುಂದಾಗಬೇಕೆಂದು ತಹಶೀಲ್ದಾರ್ ಮಹಾಬಲೇಶ್ವರ ಅವರಿಗೆ ಸಲಹೆ ನೀಡಿದರು.

**3 ಕೋಟಿ ವೆಚ್ಚದಲ್ಲಿ ಮಕ್ಕಳ ಆಸ್ಪತ್ರೆ ನಿರ್ಮಾಣ:** ಕೂಡ್ಲಿಗಿಯಲ್ಲಿ ಸರ್ಕಾರಿ ಮಕ್ಕಳ ಆಸ್ಪತ್ರೆ ನಿರ್ಮಾಣಕ್ಕೆ 3 ಕೋಟಿ ಹಣ ಮಂಜೂರಾಗಿ ವರ್ಷಗಳೇ ಗತಿಸಿದರೂ ಅಧಿಕಾರಿಗಳು ನಿವೇಶನ ಇಲ್ಲ ಎನ್ನುವ ಸಬೂಬು ಹೇಳುತ್ತಿರುವುದು ಸರಿಯಲ್ಲ. ಎನ್.ಎ. ಸೈಟ್‌ಗಳಲ್ಲಿ ಪಾರ್ಕ್‌ಗೆ ಬಿಡುವ ನಿವೇಶನದಲ್ಲಿಯೇ ಮಕ್ಕಳ ಆಸ್ಪತ್ರೆ ನಿರ್ಮಿಸಿ. ಆಸ್ಪತ್ರೆ ನಿರ್ಮಾಣ ಸಹ ನಾಗರಿಕ ಸೌಲಭ್ಯಗಳಲ್ಲೊಂದಾಗಿದೆ. ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ತಿಳಿಸುತ್ತೇನೆ. ಆದಷ್ಟು ಶೀಘ್ರ ಕೂಡ್ಲಿಗಿಯಲ್ಲಿ ಮಕ್ಕಳ ಆಸ್ಪತ್ರೆಗೆ ನಿವೇಶನ ಗುರ್ತಿಸಿ ಎಂದು ಮುಖ್ಯಾಧಿಕಾರಿ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಶಾಸಕರು ಸೂಚಿಸಿದರು.

**ಕುಡಿಯುವ ನೀರಿಗೆ ಶೇ.50 ಹಣ ಬಳಸಲು ಸೂಚನೆ:** ಬೇಸಿಗೆ ಆರಂಭವಾಗಿದ್ದು, ಇನ್ನು ಮುಂದೆ ಕುಡಿಯುವ ನೀರಿನ ಸಮಸ್ಯೆ ಆರಂಭವಾಗಲಿದೆ. ಹೀಗಾಗಿ ಗ್ರಾಮ ಪಂಚಾಯ್ತಿಗೆ 14ನೇ ಹಣಕಾಸು ಯೋಜನೆಯಲ್ಲಿ ಬಂದ ಹಣದಲ್ಲಿ ಶೇ. 25ರಷ್ಟು ಹಣವನ್ನು ಕುಡಿಯುವ ನೀರಿಗೆ ಬಳಸಬಹುದು. ಉಳಿದಂತೆ ನೈರ್ಮಲ್ಯ ಮುಂತಾದ ಕಾರ್ಯಗಳಿಗೆ ಬಳಸಬಹುದು ಎಂದು ತಾ.ಪಂ.ಇಓ ಬಸಣ್ಣ ಶಾಸಕರಿಗೆ ತಿಳಿಸಿದಾಗ ಕುಡಿಯುವ ನೀರಿಗೆ ಶೇ.25 ಸಾಕಾಗುವುದಿಲ್ಲ. ಶೇ. 50 ಹಣ ಬಳಸಿ ಎಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಬರದ ಹಾಗೇ ನೋಡಿಕೊಳ್ಳಿ. ಎಂದು ಇಓಗೆ ಸೂಚಿಸಿದರು.

ತಾ.ಪಂ. ಇಓ ಬಸಣ್ಣ, ತಹಶೀಲ್ದಾರ್ ಮಹಾಬಲೇಶ್ವರ, ಜಿ.ಪಂ. ಎಇಇ ಮಲ್ಲಿಕಾರ್ಜುನ, ಲೋಕೋಪಯೋಗಿ ಇಲಾಖೆಯ ಜೆಇ ನಾಗನಗೌಡ, ಕೃಷಿ ಇಲಾಖೆಯ ಕೆ.ವಾಮದೇವ, ಗುಡೇಕೋಟೆ ಅರಣ್ಯಾಧಿಕಾರಿ ರೇಣುಕಾ, ಕೂಡ್ಲಿಗಿ ಅರಣ್ಯಾಧಿಕಾರಿ ಮಂಜುನಾಥ ಸೇರಿದಂತೆ, ತಾಲ್ಲೂಕಿನ ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

# ಹೊಳೆಸಿರಿಗೆರೆ : ಶಾಲಾ ಮಕ್ಕಳಿಗೆ ಆಹಾರದ ಕಿಟ್ ವಿತರಣೆ



ಮಲೇಬೆನ್ನೂರು, ಏ.5- ಯೂತ್ ಫಾರ್ ಸೇವಾ ಹಾಗೂ ಟೆಕ್ಸಸ್ ಇನ್‌ಸ್ಟ್ರುಮೆಂಟ್ ಕಂಪನಿ ವತಿಯಿಂದ ಹೊಳೆಸಿರಿಗೆರೆ ಗ್ರಾಮದ ಎ.ಕೆ. ಕಾಲೋನಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಪೌಷ್ಟಿಕಾಂಶವುಳ್ಳ ಆಹಾರ ಪದಾರ್ಥಗಳನ್ನು ಎಲ್ಲಾ ಮಕ್ಕಳಿಗೂ ಗುರುವಾರ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಕಾವ್ಯ, ಉಪಾಧ್ಯಕ್ಷೆ ಚಂದ್ರಕಲಾ, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ವಿಜಯ್ ಕುಮಾರ್, ಪತ್ರಕರ್ತರಾದ ವಿಶ್ವನಾಥ್ ಮೈಲಾಳ ಹೊಳೆಸಿರಿಗೆರೆ, ಮಂಜುನಾಥ್ ಜಿ.ಎಂ. ರಾಜನಹಳ್ಳಿ, ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣ್ ಕುಮಾರ್ ಹೆಗಡೆ, ಇಸಿಓ ಅಶೋಕ ಕಾಳೆ, ಮುಖ್ಯಶಿಕ್ಷಕ ಹೆಚ್.ಎಮ್. ಸೋಮಣ್ಣ, ಶಿಕ್ಷಕರಾದ ಪಾಲಾಕ್ಷಪ್ಪ, ಚಂದ್ರಪ್ಪ, ದಾದಾಪೀರ್, ಶಿಕ್ಷಕಿ ಎಂ. ಮಾರಮ್ಮ, ಗ್ರಾಮ ಪಂಚಾಯ್ತಿ ಸದಸ್ಯ ಪ್ರಭು, ಗ್ರಾಮ ಪಂಚಾಯ್ತಿ ಮಾಜಿ ಸದಸ್ಯ ದುರುಗಪ್ಪ ಮಾಳಿಗೇರ ಸೇರಿದಂತೆ ಗ್ರಾಮದ ಮುಖಂಡರು ಹಾಜರಿದ್ದರು.

# ಜಿಎಂಐಟಿ ಕಾಲೇಜಿನಲ್ಲಿ ಉದ್ಯಮಶೀಲತಾ ತರಬೇತಿ



ದಾವಣಗೆರೆ, ಏ.5- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಟೆಕ್ಸಾಕ್ ಸಹಯೋಗದಲ್ಲಿ 10 ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮ ಆಯೋಜಿಸಿದೆ.

ಅಧ್ಯಕ್ಷತೆಯನ್ನು ಕಾಲೇಜು ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್ ವಹಿಸಿದ್ದರು. ಸಂಯೋಜನಾಧಿಕಾರಿ ಕೆ.ಎಸ್. ನಾಗರಾಜ್ ತರಬೇತಿ ಉದ್ದೇಶವನ್ನು ತಿಳಿಸಿದರು. ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಡಾ. ಸಿ.ವಿ. ಶ್ರೀನಿವಾಸ್, ಸಂಸ್ಥೆಯ ತರಬೇತಿ ಮತ್ತು ಉದ್ಯೋಗಾಧಿಕಾರಿ ತೇಜಸ್ವಿ ಕಟ್ಟೀಮನಿ ಉಪಸ್ಥಿತರಿದ್ದು, ಮಾರ್ಗದರ್ಶನ ನೀಡಿದರು. ಸಹ ಪ್ರಾಧ್ಯಾಪಕ ಎಂ.ಎಸ್. ಮಲ್ಲಿಕಾರ್ಜುನ ಕಾರ್ಯಕ್ರಮ ಆಯೋಜಿಸಿದ್ದರು.

# ಹಡಗಲಿಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ಹೂವಿನಹಡಗಲಿ ಏ.5- ಪಟ್ಟಣದ ಶ್ರೀ ಸೇವಾಲಾಲ್ ಭವನದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು. ಗ್ರಾಮೀಣ ಬಡಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ದೊರೆಯಬೇಕು. ಬಡವರಿಗೆ, ಶ್ರೀಮಂತರಿಗೆ ರೋಗಗಳಲ್ಲಿ ವ್ಯತ್ಯಾಸವಿಲ್ಲ. ಹಾಗಾಗಿ ಸಂಬಂಧಿಸಿದ ವೈದ್ಯರು ಅಗತ್ಯವಾದ ಸಮಯಕ್ಕೆ ಅಗತ್ಯ ಚಿಕಿತ್ಸೆ ಮತ್ತು ಸಲಹೆ ಕೊಟ್ಟು ಸಹಕರಿಸಬೇಕೆಂದು ಮಾಜಿ ಶಾಸಕ ಚಂದ್ರನಾಯ್ಕ ಕರೆ ನೀಡಿದರು.

ಹೃದ್ರೋಗ ತಜ್ಞ ಹಾಗೂ ಸಪ್ತಗಿರಿ ಆಸ್ಪತ್ರೆಯ ವೈದ್ಯ ಹನುಮಂತಯ್ಯ ಮಾತನಾಡಿ, ಈ ಶಿಬಿರದಲ್ಲಿ ಒಟ್ಟು 195 ಜನರನ್ನು ಆರೋಗ್ಯ ತಪಾಸಣೆಗೆ ಒಳಪಡಿಸಲಾಯಿತು. ಅದರಲ್ಲಿ ಹೃದ್ರೋಗ, ಮೂತ್ರಪಿಂಡ ಕಾಯಿಲೆ, ನರರೋಗ, ಕ್ಯಾನ್ಸರ್ ಸೇರಿದಂತೆ ಹದಿನೆಂಟು ಜನರನ್ನು ಉಚಿತ ಶಸ್ತ್ರಚಿಕಿತ್ಸೆ ಮೂಲಕ ಬೆಂಗಳೂರಿನ ಸಪ್ತಗಿರಿ ಆಸ್ಪತ್ರೆಗೆ ರವಾನಿಸಲು ತಿಳಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಗವಿಮಠದ ಡಾ. ಹಿರಿಶಾಂತವೀರ ಸ್ವಾಮೀಜಿ, ಹಿರೇಹಡಗಲಿಯ ಅಭಿನವ ಹಾಲವೀರಪ್ಪಜ್ಜ ಸ್ವಾಮೀಜಿ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡಿದರು. ತಾಂಡಾ ರಕ್ಷಣಾ ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ಲಿಂಗರಾಜನಾಯ್ಕ, ಪದಾಧಿಕಾರಿಗಳಾದ ಹಾಲೇಶನಾಯಕ.. ಧರ್ಮನಾಯಕ ಹಾಗೂ ವಕ್ತಾರ ಡಾ. ಲಕ್ಷ್ಮಣ ಲಮಾಣಿ ಮತ್ತು ತಾಲ್ಲೂಕು ಆರೋಗ್ಯಾಧಿಕಾರಿ ಎಸ್. ಶಿವಕುಮಾರ್ ಈ ಸಂದರ್ಭದಲ್ಲಿ ಭಾಗಿಯಾಗಿದ್ದರು.

# ಹರಪನಹಳ್ಳಿ ಪುರಸಭೆ : ಲಸಿಕೆ, ಮಾಸ್ಕ್ ಜಾಗೃತಿ ಜಾಥಾ



ಹರಪನಹಳ್ಳಿ, ಏ.5- ರಾಜ್ಯದಲ್ಲಿ ಕೊರೊನಾ ಎರಡನೇ ಅಲೆ ಶುರುವಾಗಿರುವ ಹಿನ್ನೆಲೆಯಲ್ಲಿ ಪಟ್ಟಣದ ಪುರಸಭೆಯಿಂದ ಕೋವಿಡ್ ಲಸಿಕೆ ಹಾಗೂ ಮಾಸ್ಕ್ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿತ್ತು.

ಜಾಗೃತಿ ಜಾಥಾದಲ್ಲಿ 45 ವರ್ಷ ವಯೋಮಾನದವರು ಹಾಗೂ ರಕ್ತದೊತ್ತಡ, ಮಧುಮೇಹದಂತಹ ಕಾಯಿಲೆಯಿಂದ ಬಳಲುವವರು ಕಡ್ಡಾಯವಾಗಿ ಸ್ವಯಂ ಪ್ರೇರಿತರಾಗಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಹಾಗೂ 8ನೇ ವಾರ್ಡ್ ಅಂಬೇಡ್ಕರ್ ನಗರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತೆರಳಿ ಕೋವಿಡ್ ಲಸಿಕೆಯನ್ನು ಹಾಕಿಸಿಕೊಳ್ಳಿರಿ ಎಂದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ಜಾಗೃತಿ ಮೂಡಿಸುವ ಭಿತ್ತಿಚಿತ್ರಗಳನ್ನು ಹಿಡಿದು ಜಾಥಾವು ಪಟ್ಟಣದ ಪ್ರವಾಸಿ ಮಂದಿರ ವೃತ್ತದಿಂದ ಪ್ರಾರಂಭವಾಗಿ ಹರಿಹರ-ಹೊಸಪೇಟೆ ರಸ್ತೆ, ಸಿನಿಮಾ ಟಾಕೀಸ್, ವಾಲ್ಮೀಕಿ ನಗರ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಜಾಗೃತಿ ಮೂಡಿಸಿತು.

ತಹಶೀಲ್ದಾರ್ ಎಲ್.ಎಂ. ನಂದೀಶ್ ಹಾಗೂ ಪುರಸಭೆ ಮುಖ್ಯಾಧಿಕಾರಿ ಬಿ.ಆರ್. ನಾಗರಾಜ ನಾಯ್ಕ ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿದರು.

ಇದೇ ವೇಳೆ ಮಾಸ್ಕ್ ಧರಿಸದ ಅಂಗಡಿ ಮಾಲೀಕರಿಗೆ ದಂಡವನ್ನು ವಿಧಿಸಲಾಯಿತು. ಹಿರಿಯ ಆರೋಗ್ಯ ನಿರೀಕ್ಷಕ ಪಿ. ಮಂಜುನಾಥ್, ಸಮುದಾಯ ಸಂಘಟನಾಧಿಕಾರಿ ಸಿ. ಲೋಕ್ಯಾನಾಯ್ಕ ಸೇರಿದಂತೆ ಪುರಸಭೆ ಪೌರ ಕಾರ್ಮಿಕರು ಜಾಗೃತಿ ಜಾಥಾದಲ್ಲಿ ಭಾಗವಹಿಸಿದ್ದರು.

# ಮಧ್ಯವರ್ತಿಗಳಿಗೆ ಹಣ ಕೊಟ್ಟ ತನಿಖೆಗೆ ಆಗ್ರಹ

**(1ನೇ ಪುಟದಿಂದ)** ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಣದೀಪ್ ಸುರ್ಜೇವಾಲಾ, ಫ್ರಾನ್ಸ್‌ನ ಸುದ್ದಿ ಪೋರ್ಟಲ್ ವರದಿಯಿಂದ ವಿಮಾನ ಖರೀದಿಯಲ್ಲಿ ಅವ್ಯವಹಾರ ನಡೆದಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪದೇ ಪದೇ ಮಾಡಿರುವ ಆರೋಪ ಸಾಬೀತಾಗಿದೆ ಎಂದಿದ್ದಾರೆ.

ಫ್ರಾನ್ಸ್ ಪೋರ್ಟಲ್ ಒಂದರ ವರದಿ ಪ್ರಕಾರ, ಫ್ರಾನ್ಸ್ ಭ್ರಷ್ಟಾಚಾರ ವಿರೋಧಿ ಸಂಸ್ಥೆ ನಡೆಸಿದ ತನಿಖೆಯಲ್ಲಿ ರಫೇಲ್ ಉತ್ಪಾದಕ ಡಸಾಲ್ಟ್, ಭಾರತೀಯ ಮಧ್ಯವರ್ತಿ ಕಂಪನಿಯಾದ ಡೆಫ್ಸಿಸ್ ಸಲ್ಯೂಷನ್ಸ್‌ಗೆ 1.1 ದಶಲಕ್ಷ ಯೂರೋ ನೀಡಿರುವುದು ಕಂಡು ಬಂದಿದೆ.

ಈ ಬಗ್ಗೆ ಪೂರ್ಣ ಹಾಗೂ ಸ್ವತಂತ್ರ ತನಿಖೆ ನಡೆಯಬೇಕು. ಎಷ್ಟು ಲಂಚ ಹಾಗೂ ಕಮೀಷನ್ ಕೊಡಲಾಯಿತು ಎಂಬುದನ್ನು ಪರಿಶೀಲಿಸಬೇಕು ಎಂದು ಪತ್ರಿಕಾಗೋಷ್ಠಿಯಲ್ಲಿ ಸುರ್ಜೇವಾಲಾ ಒತ್ತಾಯಿಸಿದ್ದಾರೆ.

ಗ್ರಾಹಕರಿಗೆ ಕೊಡುಗೆಯಾಗಿ 1.1 ದಶಲಕ್ಷ ಯೂರೋಗಳನ್ನು ನೀಡಲಾಗಿದೆ ಎಂದು ಡಸಾಲ್ಟ್ ತಿಳಿಸಿದೆ. ಇದು ರಫೇಲ್ ಒಪ್ಪಂದದಲ್ಲಿ ಮಧ್ಯವರ್ತಿಗಳಿಗೆ ಹಣ ನೀಡಿದಂತೆ ಎಂದು ಸುರ್ಜೇವಾಲಾ ಹೇಳಿದ್ದಾರೆ.

ಆರೋಪಗಳನ್ನು ತಳ್ಳಿ ಹಾಕಿರುವ ಬಿಜೆಪಿ, ರಫೇಲ್ ಒಪ್ಪಂದದ ತನಿಖೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ ಹಾಗೂ ಯಾವುದೇ ತಪ್ಪಿಲ್ಲ ಎಂದು ಸಿ.ಎ.ಜಿ. ತಿಳಿಸಿದೆ ಎಂದಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಬಿಜೆಪಿ ನಾಯಕ ಹಾಗೂ ಕೇಂದ್ರ ಸಚಿವ ರವಿ ಶಂಕರ್ ಪ್ರಸಾದ್, ಅಕ್ರಮ ನಡೆದಿದೆ ಎಂದು ಫ್ರಾನ್ಸ್ ಮಾಧ್ಯಮ ವರದಿ ಮಾಡಿರುವುದು ಆ ದೇಶದ ಕಾರ್ಪೊರೇಟ್ ಪ್ರತಿಸ್ಪರ್ಧೆಗೆ ಸಂಬಂಧಿಸಿರಬಹುದು ಎಂದು ಶಂಕಿಸಿದ್ದಾರೆ.

# ಹೊನ್ನಾಳಿ : ಮಲ್ಲದೇವರ ಕಟ್ಟೆಯಲ್ಲಿ 13 ಜೋಡಿಗಳ ವಿವಾಹ



ಹೊನ್ನಾಳಿ, ಏ.5- ತಾಲ್ಲೂಕಿನ ಮಲ್ಲದೇವರಕಟ್ಟೆ ಗ್ರಾಮದ ಶ್ರೀ ಮಲ್ಲೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಡೆದ ಧಾರ್ಮಿಕ ಸಮಾರಂಭದಲ್ಲಿ ನೂತನವಾಗಿ 13 ಜೋಡಿಗಳ ಸಾಮೂಹಿಕ ಮದುವೆ ನಡೆಯಿತು.

ಮಲ್ಲೇಶ್ವರ ಸ್ವಾಮಿಯ 23ನೇ ವರ್ಷದ ವಾರ್ಷಿಕೋತ್ಸವ, ಸಾಮೂಹಿಕ ವಿವಾಹ ಸಮಾರಂಭ ಹಾಗೂ ಧರ್ಮ ಸಭೆಯ ಸಾನ್ನಿಧ್ಯವನ್ನು ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ವಹಿಸಿದ್ದರು.

ದೇವಸ್ಥಾನ ಸಮಿತಿ ಪದಾಧಿಕಾರಿಗಳು, ಅರಬಗಟ್ಟೆ, ಸುಂಕದಕಟ್ಟೆ, ಹೆಚ್. ಕಡದಕಟ್ಟೆ ಹಾಗೂ ಹೊನ್ನಾಳಿ ಸುತ್ತ ಮುತ್ತಲ ಗ್ರಾಮಸ್ಥರು ಭಾಗವಹಿಸಿದ್ದರು.

# ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆ



ದಾವಣಗೆರೆ, ಏ.5- ಧೂಳೇಹೊಳೆ ಗ್ರಾಮದ ಸ.ಹಿ.ಪ್ರಾ. ಶಾಲೆಯ ವಿದ್ಯಾರ್ಥಿಗಳಿಗೆ ವಿದ್ಯಾ ವಿಕಾಸ ಯೋಜನೆಯಡಿ ಸಮವಸ್ತ್ರ ವಿತರಿಸಲಾಯಿತು. ಸಮೂಹ ಸಂಪನ್ಮೂಲ ವ್ಯಕ್ತಿ ಮಂಜುನಾಥ್, ಮುಖ್ಯ ಶಿಕ್ಷಕ ಬಸವರಾಜಪ್ಪ, ಗ್ರಾ.ಪಂ. ಸದಸ್ಯ ಚನ್ನಯ್ಯ ಸ್ವಾಮಿ, ಶಾಲಾ ಶಿಕ್ಷಕರು ಈ ವೇಳೆ ಹಾಜರಿದ್ದರು.

# ರವಿ ಕೆ. ಅಂಬೇಕರ್ ಅವರಿಗೆ ಪ್ರಶಸ್ತಿ



ದಾವಣಗೆರೆ, ಏ.5- ಬೆಂಗಳೂರು ನಗರ ಜಿಲ್ಲಾ ಸಾಹಿತ್ಯ ಪರಿಷತ್ತು ಹಾಗೂ ಚಿನ್ಮೂಲಾದ್ರಿ ಸಾಹಿತ್ಯ ವೇದಿಕೆ ಚಿತ್ರದುರ್ಗ ಇವರ ಸಹಯೋಗದಲ್ಲಿ ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮ ದಲ್ಲಿ ಯೋಗ ಗುರು ರವಿ ಕೆ. ಅಂಬೇಕರ್‌ಗೆ 'ಕನ್ನಡ ಸೇವಾರತ್ನ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಜಿಲ್ಲಾ ವಕೀಲರ ಸಂಘದ ಮಾಜಿ ಅಧ್ಯಕ್ಷ ರಹಮತ್‌ವುಲ್ಲಾ ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯಶಿಕ್ಷಕಿ ಪುಷ್ಪವಲ್ಲಿ ಅಧ್ಯಕ್ಷತೆ ವಹಿಸಿದ್ದರು. ಚಿನ್ಮೂಲಾದ್ರಿ ಸಾಹಿತ್ಯ ವೇದಿಕೆ ಅಧ್ಯಕ್ಷೆ ದಯಾವತಿ ಪುತ್ತೂರ್ಕರ್, ಶಿಕ್ಷಕಿ ಚಾಂದಿನಿ ಖಾಲಿದ್, ಸಹ ಶಿಕ್ಷಕಿ ಕೆ. ಅಕ್ಷತ, ಸಾಹಿತಿ ಪಂಡ್ರಹಳ್ಳಿ ಶಿವರುದ್ರಪ್ಪ ಇನ್ನಿತರರು ಭಾಗವಹಿಸಿದ್ದರು.

# ರೂಪಾಂತರ ಕೊರೊನಾ : ಜಾಗೃತಿ ಮುಖ್ಯ

## ಮಲೇಬೆನ್ನೂರಿನ ವರ್ತಕರ ಸಭೆಯಲ್ಲಿ ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ



ಮಲೇಬೆನ್ನೂರು, ಏ.5- ಎರಡನೇ ಅಲೆಯಲ್ಲಿ ಬಂದಿರುವ ರೂಪಾಂತರ ಕೊರೊನಾ ಸೋಂಕಿಗೆ ಯಾವುದೇ ರೋಗ ಲಕ್ಷಣಗಳು ಕಾಣುತ್ತಿಲ್ಲ. ಈ ಕುರಿತು ಜನರು ಜಾಗೃತಿ ವಹಿಸಬೇಕೆಂದು ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ ಹೇಳಿದರು.

ಇಲ್ಲಿನ ಪುರಸಭೆ ಕೌನ್ಸಿಲ್ ಸಭಾಂಗಣದಲ್ಲಿ ಕೋವಿಡ್ ನಿಯಂತ್ರಣ ಕುರಿತು ಕಿರಾಣಿ ಅಂಗಡಿ, ಹೋಟೆಲ್, ಬೇಕರಿ, ರಸಗೊಬ್ಬರ, ಮೆಡಿಕಲ್ ಶಾಪ್, ಕ್ಷೌರದಂಗಡಿ, ಸೇರಿದಂತೆ ಎಲ್ಲ ಅಂಗಡಿಗಳ ಮಾಲೀಕರಿಗೆ ಸೂಚನೆ ನೀಡಲು ಕರೆದಿದ್ದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಕಳೆದ ವರ್ಷ ಆಗಮಿಸಿದ್ದ ಮಹಾಮಾರಿ ಕೊರೊನಾ ಸೋಂಕಿಗೆ ಜ್ವರ, ಶೀತ, ಕೆಮ್ಮು, ಮೈಕೈ ನೋವಿನ ಲಕ್ಷಣಗಳು ಇದ್ದವು. ಆದರೆ ಈಗ ಬಂದಿರುವ ರೂಪಾಂತರ ವೈರಸ್‌ಗೆ ಯಾವುದೇ ರೋಗ ಲಕ್ಷಣಗಳು ಕಾಣಿಸುತ್ತಿಲ್ಲ. ಜನರು ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಸ್ಯಾನಿಟೈಜ್ ಬಳಸುವುದು ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದನ್ನು ಪಾಲಿಸಬೇಕು. ಅಂಗಡಿಗಳಿಗೆ ಮಾಸ್ಕ್ ಧರಿಸದೆ ಬರುವ ಜನರಿಗೆ ಕಡಿಮೆ ಬೆಲೆಯ ಮಾಸ್ಕ್‌ಗಳನ್ನು ಹಣ ಪಡೆದು ನೀಡುವಂತೆ ಲಕ್ಷ್ಮಿದೇವಿ ವರ್ತಕರಿಗೆ ತಿಳಿಸಿದರು.

45 ವರ್ಷ ಮೇಲ್ಪಟ್ಟವರು ಕಡ್ಡಾಯವಾಗಿ ಕೋವಿಡ್ ಲಸಿಕೆ ಹಾಕಿಸಿಕೊಳ್ಳಬೇಕು. ಲಸಿಕೆ ಹಾಕಬೇಕಾದರೆ ಒಟ್ಟಾಗಿ 10 ಜನರು ಇರಬೇಕು. ಒಬ್ಬಿಬ್ಬರು ಬಂದು ಲಸಿಕೆ ಹಾಕುವಂತೆ ಜೋರು ಮಾಡಬೇಡಿ ಎಂದು ಕಿವಿಮಾತು ಹೇಳಿದರು.

ಪ್ರಭಾರ ಮುಖ್ಯಾಧಿಕಾರಿ ದಿನಕರ್ ಮಾತನಾಡಿ, ಸರ್ಕಾರ ಲಾಕ್‌ಡೌನ್ ಮಾಡುವುದಿಲ್ಲ ಎಂದು ಹೇಳಿದೆ. ಜನರು ಮೈಮರೆಯದೆ ಜಾಗ್ರತೆಯಿಂದ ಇರಬೇಕು. ಸರ್ಕಾರದ ಸೂಚನೆಗಳನ್ನು ಅಂಗಡಿ ಮಾಲೀಕರು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಹೇಳಿದರು. ಶಬರಿ ಬೇಕರಿಯ ಮಣಿ ಮಾತನಾಡಿ, ಮಾಸ್ಕ್ ಧರಿಸದೆ ಬರುವ ಜನರಿಗೆ ಪುರಸಭೆಯಿಂದಲೇ ಮಾಸ್ಕ್ ಕೊಟ್ಟು ಅರಿವು ಮೂಡಿಸಿ ಎಂದರು. ಕಿರಾಣಿ ವರ್ತಕ ಶ್ರೀಪಾದ್ ಶ್ರೇಷ್ಠಿ, ಹರಿಹರ ಬೇಕರಿಯ ಶಾಂತಕುಮಾರ್, ಹಡಪದ ಅಪ್ಪಣ್ಣ ಕಟಿಂಗ್ ಶಾಪ್ ಬಸವರಾಜಪ್ಪ, ಸಾಯಿ ಬೇಕರಿ ಬಸವರಾಜ್ ತಮ್ಮ ತಮ್ಮ ಅಭಿಪ್ರಾಯ ತಿಳಿಸಿದರು.

ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಮಹಾಂತೇಶ್ ಸ್ವಾಮಿ ಮಾತನಾಡಿ, ಪಟ್ಟಣದಲ್ಲಿ ಮತ್ತೆ ಕೊರೊನಾ ಕಾಲಿಡದಂತೆ ನೋಡಿಕೊಳ್ಳಲು ಸಹಕರಿಸಿ ಎಂದರು. ಪುರಸಭೆ ಉಪಾಧ್ಯಕ್ಷೆ ಅಂಜಿನಮ್ಮ, ಅಧಿಕಾರಿಗಳಾದ ಉಮೇಶ್, ಪ್ರಭು, ಗುರುಪ್ರಸಾದ್, ನವೀನ್ ಇನ್ನಿತರರಿದ್ದರು.

# ಕೊರೊನಾ ನಿಯಂತ್ರಣಕ್ಕೆ ಎಲ್ಲರೂ ಸಹಕರಿಸಿ

## ಹರಿಹರ : ಜಾಗೃತಿ ಜಾಥಾಗೆ ಪೌರಾಯುಕ್ತೆ ಎಸ್.ಲಕ್ಷ್ಮಿ ಚಾಲನೆ



ಹರಿಹರ, ಏ.5- ಕೊರೊನಾ ಎರಡನೆ ಅಲೆ ಹೆಚ್ಚಳವಾದ ಹಿನ್ನೆಲೆಯಲ್ಲಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ನಗರಸಭೆ ವತಿಯಿಂದ ಜಾಗೃತಿ ಜಾಥಾಕ್ಕೆ ಬುಧವಾರ ಪೌರಾಯುಕ್ತೆ ಎಸ್. ಲಕ್ಷ್ಮಿ ನಗರಸಭೆ ಆವರಣದಲ್ಲಿ ಚಾಲನೆ ನೀಡಿದರು.

ಸಾಮಾಜಿಕ ಹಾಗೂ ದೈಹಿಕ ಅಂತರ ಪಾಲನೆ ಮಾಡದೇ, ಕೋವಿಡ್ ಮಾರ್ಗಸೂಚಿಗಳನ್ನು ಉಲ್ಲಂಘಿಸುವವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ಬೀದಿ ಬದಿ ವ್ಯಾಪಾರಿಗಳು ಹಾಗೂ ಸಾರ್ವಜನಿಕರು ಮುಖಕ್ಕೆ ಮಾಸ್ಕ್ ಹಾಕಿಕೊಳ್ಳಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ದಂಡ ವಿಧಿಸಲಾಗುವುದು ಎಂದು ಎಚ್ಚರಿಸಿದರು.

ನಗರದ ವಿವಿಧ ವಾರ್ಡ್‌ಗಳಲ್ಲಿ ಧ್ವನಿ ವರ್ಧಕದ ಮೂಲಕ ಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತಿದ್ದು, ನಿಧನ, ಶವ ಸಂಸ್ಕಾರ ಸಂದರ್ಭದಲ್ಲಿ ತೆರೆದ ಪ್ರದೇಶದಲ್ಲಿ ಗರಿಷ್ಠ 100 ಜನ, ಸಭಾಂಗಣ, ಹಾಲ್ ಇತ್ಯಾದಿ ಮುಚ್ಚಿದ ಪ್ರದೇಶದಲ್ಲಿ ಗರಿಷ್ಟ 50 ಜನ ಮೀರುವಂತಿಲ್ಲ. ಅಂತ್ಯಕ್ರಿಯೆ ಸಂದರ್ಭದಲ್ಲಿ ಭಾಗವಹಿಸುವಿಕೆ 50 ಜನ ಮೀರುವಂತಿಲ್ಲ. ಧಾರ್ಮಿಕ ಆಚರಣೆಗಳು ಹಾಗೂ ರಾಜಕೀಯ ಆಚರಣೆಗಳು, ಸಮಾರಂಭಗಳಲ್ಲಿ ತೆರೆದ ಪ್ರದೇಶದಲ್ಲಿ 500 ಜನಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸೇರುವುದನ್ನು ನಿಷೇಧಿಸಲಾಗಿದೆ ಎಂದರು.

ಸಾರ್ವಜನಿಕರು ಸರ್ಕಾರದ ಸೂಚನೆಯಂತೆ ಕಟ್ಟು ನಿಟ್ಟಾಗಿ ಪಾಲನೆ ಮಾಡಿ ಕೊರೊನಾ ವೈರಸ್‌ನಿಂದ ಮುಕ್ತರಾಗೋಣ ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ನಗರಸಭಾ ಸದಸ್ಯರಾದ ನೀತಾ ರಮೇಶ್ ಮೆಹರ್ವಾಡೆ, ಆಟೋ ಹನುಮಂತಪ್ಪ, ಆರೋಗ್ಯ ನಿರೀಕ್ಷಕ ರವಿಪ್ರಕಾಶ್, ಪರಿಸರ ಅಭಿಯಂತರ ತಿಮ್ಮಪ್ಪ, ಬಿಜೆಪಿ ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್ ಹಾಗೂ ಪೌರ ಕಾರ್ಮಿಕರು ಉಪಸ್ಥಿತರಿದ್ದರು.

## ಕೂಡ್ಲಿಗಿಯಲ್ಲಿ ಸ್ವಚ್ಛತಾ ಕಾರ್ಯಕ್ರಮ



ಕೂಡ್ಲಿಗಿ, ಏ.5- ಪಟ್ಟಣ ಪಂಚಾಯ್ತಿ 1ನೇ ವಾರ್ಡ್‌ನ ನೂತನ ಸದಸ್ಯೆ ಲೀಲಾವತಿ ಪ್ರಭಾಕರ ಅವರು ಬಾಬು ಜಗಜೀವನ ರಾಮ್ ಜಯಂತಿಯ ಅಂಗವಾಗಿ ಪೌರ ಕಾರ್ಮಿಕರ ಜೊತೆ ನಿಂತು ಸ್ವಚ್ಛತಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಯುವ ಮುಖಂಡರಾದ ವಿಎಸ್‌ಎಸ್‌ಎನ್ ಉಪಾಧ್ಯಕ್ಷ ನಲ್ಲಮುತ್ತಿ ದುರುಗೇಶ್, ಕಾಟಮಲ್ಲಿ ಕೊಟ್ರೇಶ್, ವೀರಭದ್ರ ಸ್ವಾಮಿ, ತಿಮ್ಮಾರೆಡ್ಡಿ ಇನ್ನಿತರರು ಉಪಸ್ಥಿತರಿದ್ದರು.

## ಇಂದು ಆರೋಗ್ಯ, ವೈದ್ಯಕೀಯ ಶಿಕ್ಷಣ ಸಚಿವರ ಜಿಲ್ಲಾ ಪ್ರವಾಸ



ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಅವರು ಇಂದು ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ. ಬೆಳಿಗ್ಗೆ 11 ಕ್ಕೆ ದಾವಣಗೆರೆ ಜಿಲ್ಲಾ ವ್ಯಾಪ್ತಿಯಲ್ಲಿನ ಸಾರ್ವಜನಿಕ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ ಸೌಲಭ್ಯಗಳ ಕುರಿತು ಪರಿಶೀಲನೆ ನಡೆಸುವರು.

ಮಧ್ಯಾಹ್ನ 2.30 ರಿಂದ ಸಂಜೆ 5 ರವರೆಗೆ ಜಿಲ್ಲಾಧಿಕಾರಿಗಳ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ಹಾಗೂ ಕೋವಿಡ್-19 ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸುವರು. ಸಂಜೆ 5 ಕ್ಕೆ ಜಿಲ್ಲಾ ಭಾಜಪ ಕಚೇರಿಗೆ ಭೇಟಿ, ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರೊಂದಿಗೆ ಚರ್ಚೆ ನಡೆಸುವರು.

### ಓದುಗರ ಪತ್ರ

## ಫಾಸ್ಟ್‌ಟ್ಯಾಗ್‌ನಲ್ಲಿನ ಸಮಸ್ಯೆ ನಿವಾರಿಸಿ

ಮಾನ್ಯರೇ,

ಕಳೆದ ಜನವರಿಯಿಂದ ಎಲ್ಲ ಮಾದರಿಯ ವಾಹನಗಳಿಗೆ ಫಾಸ್ಟ್ಯಾಗ್ ಕಡ್ಡಾಯ ಮಾಡಿ ಕೇಂದ್ರ ಸರ್ಕಾರ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ ಸ್ವಾಗತಾರ್ಹ. ಆದರೆ ಫಾಸ್ಟ್‌ಟ್ಯಾಗ್ ನಿಯಮ ಜಾರಿಗೆ ಬಂದಾಗಿನಿಂದಲೂ ಫಾಸ್ಟ್‌ಟ್ಯಾಗ್ ಎನ್ನುವುದೇ ಗೊಂದಲದ ಗೂಡಾಗಿದೆ. ಯಾಕೆಂದರೆ ಕಾರುಗಳು ಚಲಿಸದಿದ್ದರೂ ಅಥವಾ ಮನೆಯಲ್ಲಿ ಇದ್ದರೂ ಕೂಡ ಫಾಸ್ಟ್‌ಟ್ಯಾಗ್‌ನಿಂದ ಹಣ ಕಡಿತವಾಗುತ್ತಿದ್ದು ಈ ಬಗ್ಗೆ ಕಾರು ಮಾಲೀಕರು ರೋಸಿ ಹೋಗಿದ್ದಾರೆ.

ಈ ಸಮಸ್ಯೆಯಿಂದ ರಾಜ್ಯದಾದ್ಯಂತ ಈವರೆಗೂ ಪೊಲೀಸ್ ಠಾಣೆಗೆ ಅನೇಕ ದೂರುಗಳು ಹೋಗಿವೆ. ಜೊತೆಗೆ ಟೋಲ್ ಸಿಬ್ಬಂದಿ ಜೊತೆ ಪ್ರತಿ ನಿತ್ಯ ಜಗಳ ಉಂಟಾಗುತ್ತಲೇ ಇರುತ್ತವೆ. ಕೆಲವೊಮ್ಮೆ ಟೋಲ್ ಗಳಲ್ಲಿ ಫಾಸ್ಟ್ಯಾಗ್ ಇದ್ದರೂ ಬಾರ್ಕೋಡ್ ಸರಿಯಾಗಿ ರೀಡಾಗದೆ ಹಣ ಕಡಿತ ವಾಗುವುದಿಲ್ಲ ಇದರಿಂದ ಟೋಲ್ ಬಳಿ ಟ್ರಾಫಿಕ್ ಜಾಮ್ ಉಂಟಾಗಿರುವ ಉದಾಹರಣೆಗಳು ಇವೆ.

ಫಾಸ್ಟ್ಯಾಗ್ ನಲ್ಲಿ ಹಣ ಇಲ್ಲದಿದ್ದರೆ ಡಬಲ್ ರೇಟ್ ವಸೂಲಿ ಮಾಡುವ ಸಿಬ್ಬಂದಿ ಇಂತಹ ತಾಂತ್ರಿಕ ಸಮಸ್ಯೆ ಬಗೆಹರಿಸುವುದಲ್ಲವೇ, ಇವೆಲ್ಲವುಗಳನ್ನು ನೋಡುತ್ತಿದ್ದರೆ ಹಣ ಕೊಟ್ಟು ಪಾವತಿ ಮಾಡುವ ಹಿಂದಿನ ನಿಯಮವೇ ಉತ್ತಮ ಎನಿಸುತ್ತದೆ, ಕೇಂದ್ರ ಸರ್ಕಾರ ತುರ್ತಾಗಿ ಇತ್ತ ಗಮನಹರಿಸಿ ಗೊಂದಲದ ಗೂಡಾಗಿರುವ ಫಾಸ್ಟ್ಯಾಗ್ ನಲ್ಲಿ ಉಂಟಾಗಿರುವ ತಾಂತ್ರಿಕ ಲೋಪವನ್ನು ಬಗೆಹರಿಸಬೇಕಾಗಿದೆ.

- ಮುರುಗೇಶ ಡಿ., ದಾವಣಗೆರೆ.

# ಲಸಿಕೆ ಹಾಕಿಸಿಕೊಂಡು ಜಾಗೃತಿ ಮೂಡಿಸಿ



### ಉಪವಿಭಾಗಾಧಿಕಾರಿ ಮಮತಾ ಹೊಸಗೌಡ್ರು

ಹರಿಹರ, ಏ.5- ತಾಲ್ಲೂಕಿನ ಹಿರಿಯರು, ಗ್ರಾಮದ ಮುಖಂಡರು, ಜಿ.ಪಂ., ತಾ.ಪಂ. ಹಾಗೂ ಗ್ರಾಪಂ ಸದಸ್ಯರು, ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕೊರೊನಾ ರೋಗದ ಲಸಿಕೆಯನ್ನು ಹಾಕಿಸಿಕೊಂಡು ಜಾಗೃತಿ ಮೂಡಿಸಬೇಕು. ಜೊತೆಗೆ ಸಾರ್ವಜನಿಕರು ತಮ್ಮ ಆರೋಗ್ಯ ದೃಷ್ಟಿಯಿಂದ ಕೊರೊನಾ ಲಸಿಕೆ ಸದುಪಯೋಗ ಪಡಿಸಿಕೊಂಡರೆ ಮಾತ್ರ ಕೊರೊನಾ ರೋಗ ತಡೆಗಟ್ಟಲು ಸಾಧ್ಯವಾಗುತ್ತದೆ ಎಂದು ದಾವಣಗೆರೆ ಉಪ ವಿಭಾಗಾಧಿಕಾರಿ ಮಮತಾ ಹೊಸಗೌಡ್ರು ತಿಳಿಸಿದರು.

ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಕೊರೊನಾ ರೋಗವನ್ನು ತಡೆಗಟ್ಟುವ ಕುರಿತು ಕರೆದಿದ್ದ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಸಾರ್ವಜನಿಕರು ರೋಗದ ಬಗ್ಗೆ ಅಸಡ್ಡೆ ತೋರುತ್ತಿದ್ದಾರೆ. ಸರ್ಕಾರ ಪ್ರತಿ ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಲಸಿಕೆ ಹಾಕಲು ಅಗತ್ಯವಿರುವ ಎಲ್ಲ ವ್ಯವಸ್ಥೆಗಳನ್ನು ಮಾಡುತ್ತಿದೆ. ಜೊತೆಗೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ. ಕೊರೊನಾ ಲಸಿಕೆ ಹಾಕಿಸಿಕೊಂಡರೆ ಕೊರೊನಾ ಬರುವುದಿಲ್ಲ ಎಂದು ಭಾವಿಸುವುದು ಸಹ ತಪ್ಪು ಗ್ರಹಿಕೆ ಆಗುತ್ತದೆ. ಲಸಿಕೆ ಹಾಕಿಸಿಕೊಂಡರೂ ಕೂಡ ಕಾಯಿಲೆ ಬರುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಅಸಡ್ಡೆ ತೋರಿಸದೆ ಸರ್ಕಾರದ ಆದೇಶ ಪಾಲನೆ ಮಾಡುವ ಮೂಲಕ ಆರೋಗ್ಯ ರಕ್ಷಣೆ ಮಾಡಿಕೊಳ್ಳಿರಿ ಎಂದರು.


ಸಾರ್ವಜನಿಕರು ಹೆಚ್ಚಾಗಿ ಸೇರುವಂತಹ ಸ್ಥಳಗಳಲ್ಲಿ ಸರ್ಕಾರದ ವತಿಯಿಂದ ಜಾಗೃತಿ ಮೂಡಿಸುವ ಕಾರ್ಯ ಮಾಡಲಾಗುತ್ತಿದೆ. ಪ್ರತಿ ಗ್ರಾಮ ಪಂಚಾಯ್ತಿಯ ಆರೋಗ್ಯ ಸಿಬ್ಬಂದಿಗಳು, ಪಿಡಿಓ ಮತ್ತು ಆಶಾ ಕಾರ್ಯಕರ್ತೆಯರು ಹಾಗೂ ಅಂಗನವಾಡಿ ಕಾರ್ಯಕರ್ತೆಯರನ್ನು ಈ ಕೆಲಸಕ್ಕೆ ಹೆಚ್ಚು ಬಳಸಿಕೊಳ್ಳುವ ಮೂಲಕ ಕೊರೊನಾ ರೋಗವನ್ನು ತಡೆಗಟ್ಟಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಈ ಸಂದರ್ಭದಲ್ಲಿ ತಾಲ್ಲೂಕಿನ ಮರಳಹಳ್ಳಿ ಗ್ರಾಮದ ಕುಟುಂಬದ ಸದಸ್ಯರು ತಮ್ಮ ಆಸ್ತಿಯಲ್ಲಿ ಕೆಲವು ವ್ಯಕ್ತಿಗಳು ಅಕ್ರಮವಾಗಿ ಮನೆಗಳನ್ನು ಕಟ್ಟಿಕೊಂಡು ಜೀವನ ನಡೆಸುತ್ತಿದ್ದಾರೆ. ಅವರನ್ನು ಸ್ಥಳದಿಂದ ತೆರವು ಮಾಡುವಂತೆ ಮನವಿ ಮಾಡಿದರು.

ಈ ವೇಳೆ ಮರಳಹಳ್ಳಿ ಗ್ರಾಮದ ಚಂದ್ರಪ್ಪ ಮಾತನಾಡಿ ಸರ್ವೆ ನಂ 1 ರಲ್ಲಿ 12.24 ಗುಂಟೆ ಜಮೀನು ಇದ್ದು ಅದರಲ್ಲಿ ಸರ್ಕಾರ ಹಲವಾರು ವರ್ಷಗಳ ಹಿಂದೆ 1 ಎಕರೆ ಭೂಮಿಯನ್ನು ಭೂ ಸ್ವಾಧೀನ ಪಡಿಸಿಕೊಂಡಿದೆ ಎಂದು ಪಹಣಿಯಲ್ಲಿ ತೋರಿಸುತ್ತಿದೆ. ಆದರೆ ಆ ಭೂ ಸ್ವಾಧೀನ ಪಡಿಸಿಕೊಂಡ ಜಮೀನಿಗೆ ಇವತ್ತಿನವರೆಗೂ ಒಂದು ನಯಾ ಪೈಸೆ ಪರಿಹಾರ ನೀಡಿಲ್ಲ ಮತ್ತು ರಸ್ತೆಗೆಂದು ಮೀಸಲಿದ್ದ ಪ್ರದೇಶದಲ್ಲಿ ಕೆಲವರು ಅಕ್ರಮವಾಗಿ ಮನೆಗಳನ್ನು ಕಟ್ಟಿಕೊಂಡಿದ್ದು, ಓಡಾವುದಕ್ಕೂ ತೊಂದರೆ ಮಾಡಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ. ರಾಮಚಂದ್ರಪ್ಪ. ಇಓ ಜೆ.ಡಿ. ಗಂಗಾಧರನ್, ದುರುಗಮ್ಮ, ಗಂಗಮ್ಮ ಹಾಗು ಇನ್ನಿತರರು ಹಾಜರಿದ್ದರು.

# ಜೋಯಿಸರ ಹರಳಹಳ್ಳಿಯಲ್ಲಿ ಇಂದು ತೇರು



ಹುಟ್ಟು, ಬದುಕು ಹಾಗೂ ಸಮಾಧಿ ಎಲ್ಲವನ್ನೂ ಸಮಾಜಕ್ಕಾಗಿ ಮುಡುಪಾಗಿಟ್ಟವರು ಹಾನಗಲ್ಲ ಕುಮಾರ ಶಿವಯೋಗಿಗಳು ಎಂದು ಘೋಡಗೇರಿ ವಿರಕ್ತ ಮಠದ ಶ್ರೀ ಕಾಶಿನಾಥ ಸ್ವಾಮಿಗಳು ಹೇಳಿದರು.

ಅವರ ಹುಟ್ಟೂರು ರಾಣೇಬೆನ್ನೂರು ತಾಲ್ಲೂಕಿನ ಜೋಯಿಸರ ಹರಳಹಳ್ಳಿಯಲ್ಲಿ ಇಂದು ಪ್ರಥಮ ಬಾರಿಗೆ ನಡೆಯುತ್ತಿರುವ ಶಿವಯೋಗಿಗಳ ರಥೋತ್ಸವ ಕುರಿತು ಶ್ರೀಗಳು ನಿನ್ನೆ ಮಾಧ್ಯಮ ಗೋಷ್ಠಿ ನಡೆಸಿ ಮಾತನಾಡಿದರು.

ಧಾರ್ಮಿಕ ಶ್ರೀಮಂತರಾದ ಬಸವಾಂಬೆ ಹಾಗೂ ಬಸಯ್ಯ ಸಾಲಿಮಠ ಬಡ ದಂಪತಿಗಳ ಉದರದಲ್ಲಿ ಜನಿಸಿದ ಶಿವಯೋಗಿಗಳು ಬಾಲ್ಯದಲ್ಲಿಯೇ ತಮಗಾಗಿ ಮಾಡಿದ್ದ ಎಡೆಯನ್ನು ಜಂಗಮರಿಗೆ ನೀಡಿ ಅವರ ಹಸಿವು ತೀರಿಸಿದ ಕರುಣಾಮಯಿ.

ವಿಕಲಾಂಗರ ಬಗ್ಗೆ ತೀವ್ರ ಅನುಕಂಪ ಹೊಂದಿದ್ದ ಶಿವಯೋಗಿಗಳು ಗಾನಯೋಗಿ ಪಂಚಾಕ್ಷರಿ ಗವಾಯಿಗಳು ಹಾಗೂ ಪುಟ್ಟರಾಜ ಗವಾಯಿಗಳಿಗೆ ನಿರಪೇಕ್ಷಿತ ಭಾವದೊಂದಿಗೆ ಎಲ್ಲ ಜಾತಿಯ ವಿಕಲಾಂಗರ ಬದುಕನ್ನು ಹಸನಗೊಳಿಸುವಂತೆ ಆಶೀರ್ವದಿಸಿದವರು ಕುಮಾರ ಶಿವಯೋಗಿಗಳು ಎಂದರು.

ಒಣಬ, ಬಣಜಿಗ, ಗಾಣಿಗ ಹೀಗೆ ಲಿಂಗ ಕಟ್ಟಿದವರೆಲ್ಲ ಲಿಂಗಾಯತರು. ಗುರು-ವಿರಕ್ತರೆಲ್ಲರೂ ಒಂದಾಗಿ ಬದುಕಬೇಕು ಎನ್ನುವ ಮಹದಾಸೆ ಇಟ್ಟುಕೊಂಡಿದ್ದ ಶ್ರೀ ಶಿವಯೋಗಿಗಳು ಅಖಿಲ ಭಾರತ ವೀರಶೈವ ಮಹಾಸಭಾವನ್ನು ಹುಟ್ಟುಹಾಕುವ ಆಲೋಚನೆಯನ್ನು 1908 ರಲ್ಲಿ ಮಾಡಿ, 1909 ಧಾರವಾಡದಲ್ಲಿ ಸ್ಥಾಪನೆ ಮಾಡಿದರು.

12 ನೇ ಶತಮಾನದಲ್ಲಿ ಶರಣ ಗಟವಾಳಯ್ಯ ಅವರು ತಾಳೆಗರಿಯಲ್ಲಿ ಬರೆದಿಟ್ಟಂತೆ ಮುಂದೊಬ್ಬ, ಸರ್ವರನ್ನು ಸಮಾನ ಭಾವದಲ್ಲಿ ಕಾಣುವ ದಯಾಳು, ಕರುಣಾಮಯಿ ಹುಟ್ಟುತ್ತಾನೆ ಎನ್ನುವ ಕಾಲಜ್ಞಾನ, ಶಿವಯೋಗಿಗಳ ಹುಟ್ಟನ್ನು ಸಾಬೀತು ಪಡಿಸಿದೆ ಎಂದು ಕಾಶಿನಾಥ ಶ್ರೀಗಳು ಹೇಳಿದರು.

ಮಾಧ್ಯಮ ಗೋಷ್ಠಿಯಲ್ಲಿ ವಾಣಿಜ್ಯೋದ್ಯಮ ಸಂಸ್ಥೆಯ ಉಪಾಧ್ಯಕ್ಷ ಜಿ.ಜಿ. ಹೊಟ್ಟಿಗೌಡ್ರ, ರಥದ ದಾನಿ ಎಸ್.ಬಿ. ಚೌಡಪ್ಪಳವರ, ಶಿಲ್ಪಿ ಚನ್ನಪ್ಪಾಚಾರಿ ಬಡಿಗೇರ ಮುಂತಾದವರಿದ್ದರು.

### ಕೆಎಲ್‌ಇ ನಡೆ ದುಃಖಿತ...

ಏಳು ಜನ ಪತ್ನಿಯರನ್ನು ಹೊಂದಿಯೂ ಸಂತಾನ ವಿಲ್ಲದೇ ದುಃಖಿತರಾಗಿದ್ದ ಶಿರಸಂಗಿ ಲಿಂಗರಾಜ ದೇಸಾಯಿ ಮತ್ತು ಅವರ ಏಳು ಜನ ಪತ್ನಿಯರಿಗೆ ಮನವೊಲಿಸಿ ಅವರೆಲ್ಲ ಸಂಪತ್ತನ್ನು ಸಮಾಜಕ್ಕೆ ದಾನ ಮಾಡಿ ಸಮಾಜಕ್ಕೆ ತಂದೆ - ತಾಯಿಗಳಾಗಿರಿ ಎಂದು ಕುಮಾರ ಶಿವಯೋಗಿಗಳು ಹರಸಿದರು. ಲಿಂಗರಾಜ ದೇಸಾಯಿ ಅವರ ಅಪಾರ ಸಂಪತ್ತಿನಿಂದ ಕಟ್ಟಲಾದ ಕೆಎಲ್‌ಇ ಸಂಸ್ಥೆಯ ಇಂದಿನ ನಡೆ ಬಹಳಷ್ಟು ದುಃಖ ತರಿಸುವಂತಾಗಿದೆ. ಆ ಪುಣ್ಯಾತ್ಮರ ಸ್ಮರಣೆ ನಶಿಸಿರುವುದು ತುಂಬಲಾರದಷ್ಟು ನೋವುಂಟು ಮಾಡುತ್ತಿದೆ ಎಂದು ಘೋಡಗೇರಿ ಶ್ರೀಗಳು ಅಸಮಾಧಾನ ವ್ಯಕ್ತಪಡಿಸಿದರು.

### ಇಂದು ರಥೋತ್ಸವ

63 ವರ್ಷ ಬದುಕಿದ ಕುಮಾರ ಶಿವಯೋಗಿಗಳ ಮಂದಿರವನ್ನು 63 ಅಡಿ ಎತ್ತರ ಕಟ್ಟಲಾಗಿದೆ. ಇಂದು ಪ್ರಥಮ ಬಾರಿಗೆ ನಡೆಯುವ ರಥವನ್ನು ಪಕ್ಕದ ಎರೇಕುಪ್ಪಿ ಗ್ರಾಮದ ಶಿಲ್ಪಿ ಚನ್ನಪ್ಪ ಬಡಿಗೇರ ಅವರು 17 ಅಡಿ 3 ಇಂಚು ಎತ್ತರ ಧ್ವಜಾಯದಲ್ಲಿ ನಿರ್ಮಿಸಿದ್ದಾರೆ. ಇದರ ವೆಚ್ಚ ಸುಮಾರು 12 ಲಕ್ಷದಷ್ಟು ಹಣವನ್ನು ಸ್ಥಳೀಯ ವರ್ತಕ ಎಸ್.ಬಿ.ಚೌಡಪ್ಪಳವರ ಭರಿಸಿದ್ದಾರೆ.

### ರಾಜ್ಯ - ರಾಷ್ಟ್ರೀಯ ವಾರ್ತೆ

## ನಕ್ಸಲರಿಂದ ಕಮಾಂಡೋ ಅಪಹರಣ ಹೇಳಿಕೆಗಳ ಪರಿಶೀಲನೆ

ನವದೆಹಲಿ, ಏ. 5 - ಛತ್ತೀಸ್‌ಘಡದಲ್ಲಿ ಕಾರ್ಯಾಚರಣೆ ವೇಳೆ ಸಂಘರ್ಷದ ನಂತರ ನಕ್ಸಲ್ ವಿರೋಧಿ ಪಡೆಯಾದ ಕೋಬ್ರಾದ ಕಮಾಂಡೋ ಒಬ್ಬರನ್ನು ಮಾವೋಗಳು ಅಪಹರಿಸಿದ್ದಾರೆ ಎಂಬ ಹೇಳಿಕೆಗಳ ಬಗ್ಗೆ ಪರಿಶೀಲಿಸುತ್ತಿರುವುದಾಗಿ ಅಧಿಕೃತ ಮೂಲಗಳು ತಿಳಿಸಿವೆ. ಈ ಹೇಳಿಕೆಗಳನ್ನು ನಂಬಲು ಕಾರಣಗಳಿವೆ. ಮಾವೋ ಸಂಘಟನೆಯೊಂದು ಪತ್ರಕರ್ತನೋರ್ವನಿಗೆ ಭಾನುವಾರ ಸಂಜೆ ಮಾಡಿದ ಕರೆ ಆಧರಿಸಿ ತನಿಖೆ ನಡೆಸಲಾಗುತ್ತಿದೆ.

ಕಮಾಂಡೋ ರಾಕೇಶ್ವರ ಸಿಂಗ್ ಮಿನ್ಹಾಸ್ ಅವರನ್ನು ಪತ್ತೆ ಮಾಡಲು ಸಾಧ್ಯವಾಗಿಲ್ಲ. ಕೆಲ ನಕ್ಸಲರು ಅಪಹರಿಸಿರುವುದಾಗಿ ಹೇಳಿರುವುದಕ್ಕೆ ಇನ್ನೂ ಖಚಿತ ಸಾಕ್ಷಿಗಳು ದೊರೆತಿಲ್ಲ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ 22 ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದರು ಹಾಗೂ 31 ಇತರರು ಗಾಯಗೊಂಡಿದ್ದರು.

## ರಫೇಲ್ ಮಧ್ಯವರ್ತಿ ಕಾಂಗ್ರೆಸ್ ಜೊತೆ ಸಂಪರ್ಕ : ಬಿಜೆಪಿ

ನವದೆಹಲಿ, ಏ. 5 – ರಫೇಲ್ ಖರೀದಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪಗಳು ಸಂಪೂರ್ಣ ನಿರಾಧಾರ ಎಂದು ಬಿಜೆಪಿ ಹೇಳಿದ್ದು, ಖರೀದಿ ಕುರಿತು ತನಿಖೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ ಹಾಗೂ ಸಿ.ಎ.ಜಿ. ವರದಿಯಲ್ಲೂ ಸಹ ಯಾವುದೇ ತಪ್ಪು ಕಂಡು ಬಂದಿಲ್ಲ ಎಂದು ಹೇಳಿದೆ.

ಫ್ರಾನ್ಸ್ ಮಾಧ್ಯಮವೊಂದರ ವರದಿಯ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮಾಡಿರುವ ಆರೋಪಗಳನ್ನು ತಳ್ಳಿ ಹಾಕಿರುವ ಬಿಜೆಪಿ ನಾಯಕ ಹಾಗೂ ಕೇಂದ್ರ ಸಚಿವ ರವಿ ಶಂಕರ್ ಪ್ರಸಾದ್, ಕಾಂಗ್ರೆಸ್ ಈ ವಿಷಯದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಸೋತಿದೆ. 2019ರ ಲೋಕಸಭಾ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಪ್ರಧಾನ ಮಂತ್ರಿ ವಿರುದ್ಧ ರಫೇಲ್ ಬಗ್ಗೆ ಎಲ್ಲಾ ರೀತಿಯ ಅವಹೇಳನ ಮಾಡಿಯೂ ಸೋತಿದೆ ಎಂದು ಹೇಳಿದ್ದಾರೆ.

ರಫೇಲ್ ಒಪ್ಪಂದ ಕುರಿತ ಫ್ರಾನ್ಸ್ ವರದಿಯಲ್ಲಿ ಸುರೇಶ್ ಗುಪ್ತ ಎಂಬ ಮಧ್ಯವರ್ತಿಯ ಹೆಸರು ಪ್ರಸ್ತಾಪವಾಗಿದೆ. ಈತನನ್ನು 2019ರಲ್ಲಿ ಜಾರಿ ನಿರ್ದೇಶನಾಲಯ ಆಗುಸ್ಟಾ ವೆಸ್ಟ್‌ಲ್ಯಾಂಡ್ ಪ್ರಕರಣದಲ್ಲಿ ಬಂಧಿಸಿದೆ ಎಂದು ಪ್ರಸಾದ್ ಹೇಳಿದ್ದಾರೆ.

ಈ ತನಿಖೆಯಲ್ಲಿ ಹಲವಾರು ಕಾಂಗ್ರೆಸ್ ನಾಯಕರ ಹೆಸರುಗಳು ಬೆಳಕಿಗೆ ಬಂದಿವೆ. ಕಾಂಗ್ರೆಸ್ ರಕ್ಷಣಾ ಪಡೆಗಳನ್ನು ದುರ್ಬಲಗೊಳಿಸುವ ಪ್ರಯತ್ನ ಮಾಡುತ್ತಿದೆ ಎಂದವರು ಆರೋಪಿಸಿದ್ದಾರೆ.

## ಫೇಸ್‌ಬುಕ್ : ಭಾರತದ 61 ಲಕ್ಷ ಬಳಕೆದಾರರ ಮಾಹಿತಿ ಸೋರಿಕೆ

ನವದೆಹಲಿ, ಏ. 5 – ಭಾರತದ 61 ಲಕ್ಷ ಫೇಸ್‌ಬುಕ್ ಬಳಕೆದಾರರ ದೂರವಾಣಿ ಸಂಖ್ಯೆ ರೀತಿಯ ವೈಯಕ್ತಿಕ ವಿವರಗಳು ಆನ್‌ಲೈನ್‌ನಲ್ಲಿ ಸೋರಿಕೆಯಾಗಿದ್ದು, ಅವುಗಳನ್ನು ಹ್ಯಾಕಿಂಗ್ ವೇದಿಕೆಗಳಲ್ಲಿ ಪ್ರಕಟಿಸಲಾಗಿದೆ ಎಂದು ಸೈಬರ್ ಸುರಕ್ಷತಾ ಸಂಸ್ಥೆಯೊಂದು ತಿಳಿಸಿದೆ.

ಸೈಬರ್ ರಕ್ಷಣಾ ಉದ್ಯಮದ ಸಹ ಸ್ಥಾಪಕರಾಗಿರುವ ಅಲೋನ್ ಗುಲ್ ಈ ಬಗ್ಗೆ ಹೇಳಿಕೆ ನೀಡಿದ್ದು, ಜಾಗತಿಕವಾಗಿ 533 ದಶಲಕ್ಷ ಬಳಕೆದಾರರ ಮಾಹಿತಿ ಸೋರಿಕೆಯಾಗಿದೆ. ಇವರಲ್ಲಿ ಭಾರತದ 61 ಲಕ್ಷ ಹಾಗೂ ಅಮೆರಿಕದ 3.2 ಕೋಟಿ ಗ್ರಾಹಕರ ಮಾಹಿತಿ ಸೇರಿದೆ ಎಂದಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಫೇಸ್‌ಬುಕ್ ವಕ್ತಾರರು, ಈ ವರದಿ 2019ರಲ್ಲಿ ಪ್ರಕಟವಾಗಿತ್ತು. ನಾವು ಆಗಸ್ಟ್ 2019ರಲ್ಲಿ ವಿಷಯ ಬಗೆಹರಿಸಿದ್ದೇವೆ ಎಂದಿದ್ದಾರೆ.

## ಚುನಾವಣೆ ನಂತರ ಸಾರಿಗೆ ನೌಕರರ ವೇತನ ಪರಿಷ್ಕರಣೆ : ಸವದಿ

ಬೆಂಗಳೂರು, ಏ. 5 – ಸಾರಿಗೆ ನೌಕರರ ವೇತನ ಪರಿಷ್ಕರಣೆಗೆ ಸರ್ಕಾರ ಸಿದ್ಧವಿದೆಯಾದರೂ, ಉಪಚುನಾವಣೆಯ ನೀತಿ ಸಂಹಿತೆ ಅಡ್ಡಿಯಾಗಿದೆ. ಮೇ 4ರ ನಂತರ ವೇತನ ಹೆಚ್ಚಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ತಿಳಿಸಿದ್ದಾರೆ.

ಆರನೇ ವೇತನ ಆಯೋಗಕ್ಕೆ ಸಮನಾದ ವೇತನ ಕಲ್ಪಿಸುವಂತೆ ಸಾರಿಗೆ ನೌಕರರು ಒತ್ತಾಯಿಸಿದ್ದು ಮುಷ್ಕರದ ಎಚ್ಚರಿಕೆ ನೀಡಿದ್ದಾರೆ.

ಈ ಹಿನ್ನೆಲೆಯಲ್ಲಿ ಹೇಳಿಕೆ ನೀಡಿರುವ ಸವದಿ, ವೇತನ ಪರಿಷ್ಕರಣೆಗೆ ಸರ್ಕಾರ ತೀರ್ಮಾನಿಸಿದೆ. ಹಣಕಾಸು ಇಲಾಖೆಯೂ ಒಪ್ಪಿಕೊಂಡಿದೆ. ಆದರೆ, ಚುನಾವಣಾ ಆಯೋಗದ ಒಪ್ಪಿಗೆ ಇಲ್ಲದೇ ವೇತನ ಪರಿಷ್ಕರಣೆ ವಿಷಯ ಪ್ರಕಟಿಸುವಂತಿಲ್ಲ. ಮೇ 4ರಂದು ಚುನಾವಣಾ ನೀತಿ ಸಂಹಿತೆ ಅಂತ್ಯವಾಗಲಿದ್ದು, ನಂತರ ಪರಿಷ್ಕೃತ ವೇತನ ನೀಡಲಾಗುವುದು ಎಂದವರು ಹೇಳಿದ್ದಾರೆ.

## ಮಸ್ಕಿ ಕ್ಷೇತ್ರದಲ್ಲಿ ಯುವ ಕಾಂಗ್ರೆಸ್‌ನಿಂದ ಬಿರುಸಿನ ಪ್ರಚಾರ

### ಹಲವೆಡೆ ರೋಡ್ ಶೋ, ಕೆಲವೆಡೆ ಪಾದಯಾತ್ರೆ: ಜನ ವಿರೋಧಿ ಬಿಜೆಪಿ ವಿರುದ್ಧ ಆಕ್ರೋಶ




ಮಸ್ಕಿ , ಏ.5- ರಾಜ್ಯದಲ್ಲಿ ತೀವ್ರ ಕುತೂಹಲ ಕೆರಳಿಸಿರುವ ರಾಯಚೂರು ಜಿಲ್ಲೆಯ ಮಸ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಯುವ ಕಾಂಗ್ರೆಸ್ ಪಡೆ ತೀವ್ರ ಪ್ರಚಾರದಲ್ಲಿ ನಿರತವಾಗಿದೆ.

ಯುವ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್. ರಕ್ಷಾ ರಾಮಯ್ಯ ನೇತೃತ್ವದ ಯುವ ತಂಡ ಮತದಾರರನ್ನು ಸೆಳೆಯುವ ಪ್ರಯತ್ನ ಮಾಡುತ್ತಿದೆ. ಯುವ ಸಮೂಹ ಸೇರಿದಂತೆ, ಎಲ್ಲಾ ವಯೋಮಾನದ ಮತದಾರರನ್ನು ತಲುಪುವ ಪ್ರಯತ್ನ ಮಾಡಿತು.

ಉಮಲುಟಿ, ಕಲಮಂಗಿ, ಗುಂಜಳ್ಳಿ, ವಿರುಪಾಪುರ, ಅರಳಹಳ್ಳಿ, ಗೌಡನ ಬಾವಿ, ಬಳಗಾನೂರು, ಸಿಂಧನೂರು ಭಾಗಗಳಲ್ಲಿ ಮತದಾರರು ಯುವ ಕಾಂಗ್ರೆಸ್ ತಂಡವನ್ನು ಅದ್ಧೂರಿಯಾಗಿ ಸ್ವಾಗತಿಸಿದರು.

ಹಲವು ಕಡೆಗಳಲ್ಲಿ ರೋಡ್ ಶೋ, ಕೆಲವೆಡೆ ಪಾದಯಾತ್ರೆ ನಡೆಸಿದ ಯುವ ಕಾಂಗ್ರೆಸ್ ಪದಾಧಿಕಾರಿಗಳು, ಆಪರೇಷನ್ ಕಮಲಕ್ಕೆ ಬಲಿಯಾದ ಬಿಜೆಪಿ ಅಭ್ಯರ್ಥಿಯನ್ನು ಬೆಂಬಲಿಸಬೇಡಿ, ಕಾಂಗ್ರೆಸ್ ಅಭ್ಯರ್ಥಿ ಬಸವನಗೌಡ ತುರವಿಹಾಳ್ ಅವರಿಗೆ ಮತ ನೀಡಿ ಎಂದು ಮನವಿ ಮಾಡಿದರು.

ರಕ್ಷಾ ರಾಮಯ್ಯ ಮಾತನಾಡಿ, ರಾಜಕೀಯ ವ್ಯವಸ್ಥೆಯಲ್ಲಿ ಸುಧಾರಣೆ ತರಬೇಕಾಗಿದ್ದು, ಇದಕ್ಕೆ ಉತ್ತಮ ವ್ಯಕ್ತಿಗಳು ಶಾಸನ ಸಭೆಗೆ ಆರಿಸಿ ಬರಬೇಕು. ಬಿಜೆಪಿಯವರಿಗೆ ಜನಪರ ಸಮಸ್ಯೆಗಳನ್ನು ನಿವಾರಿಸುವ ಆಸಕ್ತಿ ಇಲ್ಲ. ಮಹಿಳೆಯರ ಬಗ್ಗೆ ಗೌರವವಿಲ್ಲ. ಬೆಲೆ ಏರಿಕೆ ಜನ ಸಾಮಾನ್ಯರನ್ನು ಅತೀವವಾಗಿ ಬಾಧಿಸುತ್ತಿದೆ. ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳು ಜನ ವಿರೋಧಿಯಾಗಿವೆ ಎಂದು ಆರೋಪಿಸಿದರು.

## ಸಿಎಂ ವಿರುದ್ಧ ಕ್ರಮಕ್ಕೆ ತಡೆ

(1ನೇ ಪುಟದಿಂದ) ಪ್ರಕರಣ ವಜಾಗೊಳಿಸಬೇಕು ಎಂಬ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದ್ದನ್ನು ಪ್ರಶ್ನಿಸಿ ಯಡಿಯೂರಪ್ಪ ಸುಪ್ರೀಂ ಕೋರ್ಟ್ ನಲ್ಲಿ ಅರ್ಜಿ ದಾಖಲಿಸಿದ್ದರು. ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ನೇತೃತ್ವದ ಪೀಠ ವಿಚಾರಣೆ ನಡೆಸಿ, ಹೈಕೋರ್ಟ್ ಆದೇಶ ತಡೆದಿದೆ. 2012 ರಲ್ಲಿ ಲೋಕಾಯುಕ್ತ ಪೊಲೀಸರು ದಾಖಲಿಸಿದ್ದ ಆರೋಪ ಪಟ್ಟಿಯನ್ವಯ ಯಡಿಯೂರಪ್ಪ ವಿರುದ್ಧ ಕ್ರಮಮುಂದುವರೆಸುವಂತೆಯೂ ಹೈಕೋರ್ಟ್ ನಿರ್ದೇಶನ ನೀಡಿತ್ತು.

2008-12ರ ಅವಧಿಯಲ್ಲಿ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಅಕ್ರಮವಾಗಿ 20 ಎಕರೆ ಜಾಗ ಡಿನೋಟಿಫಿಕೇಷನ್ ಮಾಡಿ ಖಾಸಗಿಯವರಿಗೆ ಲಾಭ ಮಾಡಿಕೊಡಲಾಗಿತ್ತು ಎಂದು ಖಾಸಗಿ ದೂರೊಂದನ್ನು ದಾಖಲಿಸಲಾಗಿತ್ತು.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
25ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ದಿ. ಷಣ್ಮುಖಪ್ಪ ಇವರ ಜ್ಞಾಪಕಾರ್ಥವಾಗಿ ಪತ್ನಿ ಶ್ರೀಮತಿ ದೇವೀರಮ್ಮ ಮತ್ತು ಕುಟುಂಬ ವರ್ಗದವರ ಸೇವಾರ್ಥ

**ಸೈಟ್‌ಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ ಪೂರ್ವ 30x50 ಕಾರ್ನರ್, 30x40 ಪಶ್ಚಿಮ ಕಾರ್ನರ್, 30x50 ಪಶ್ಚಿಮ, ಬಸವೇಶ್ವರ ಲೇಔಟ್ 30x40 ಪೂರ್ವ, 30x40 ಪಶ್ಚಿಮ, ಶಿವಕುಮಾರಸ್ವಾಮಿ ಬಡಾವಣೆ, ಪೂರ್ವ 22x68.
ಸೈಟ್ ಕೊಡುವುದಕ್ಕೆ ಹಾಗೂ ತೆಗೆದುಕೊಳ್ಳುವುದಕ್ಕೆ ವಿಚಾರಿಸಿ
ಐಗೂರು ವಿಜಯ್‌ಕುಮಾರ್ 99457 02495
ಸುರೇಶ್ 95911 60520

**ಮನೆಯ ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿಕೊಳ್ಳಿ, ಕಡಿಮೆ ದರದಲ್ಲಿ
72046 33302

**ಸೈಟು ಬೇಕಿದೆ (ನೆಲಮಂಗಲದಲ್ಲಿ)**
ನೆಲಮಂಗಲ ಸೊಂಡೆಕೊಪ್ಪ ರೋಡ್, ತರಳಬಾಳು ನಗರದಲ್ಲಿ
ಕಿರಣ್ ಬೂಸ್ನೂರ್ : 97315-63409

**LADIES PGಗೆ ಬೇಕಾಗಿದ್ದಾರೆ**
ಮಹಿಳಾ ಅಡುಗೆಯವರು ಬೇಕಾಗಿದ್ದಾರೆ. ಅನುಭವ ಇರುವವರಿಗೆ ಆದ್ಯತೆ.
Good Homes Ladies PG
S.N. Layout, Davanagere.
Contact
91139 59465
98446 09024

**ರೆಸ್ಟೋರೆಂಟ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ**
ರೆಸ್ಟೋರೆಂಟ್‌ನಲ್ಲಿ ತಂದೂರಿ ರೋಟಿ ಮಾಡಲು ಬೇಕಾಗಿದ್ದಾರೆ. ಸಂಪರ್ಕಿಸಿ
96325 21958
63665 18513

**ಸೈಟ್‌ಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪೂರ್ವ 30x40, 40x60, ಪಶ್ಚಿಮ 30x40, 38x40, ದಕ್ಷಿಣ 50x80, 50x120. ವಿನಾಯಕ ಬಡಾವಣೆ (ವಿದ್ಯಾನಗರ) ಉತ್ತರ 40x86 ಅಕ್ಕಪಕ್ಕ, ದಕ್ಷಿಣ 40x90, 40x50.
ಸೈಟ್ ಕೊಡುವುದಕ್ಕೆ ಹಾಗೂ ತೆಗೆದುಕೊಳ್ಳುವುದಕ್ಕೆ ವಿಚಾರಿಸಿ
ಐಗೂರು ವಿಜಯ್‌ಕುಮಾರ್ 99457 02495
ಸುರೇಶ್ 95911 60520

**ಬೇಕಾಗಿದ್ದಾರೆ**
ದಾವಣಗೆರೆಯ ಪ್ರತಿಷ್ಠಿತ ಆಸ್ಪತ್ರೆಯಲ್ಲಿ ಕೆಲಸ ಮಾಡಲು ನರ್ಸ್ ಗಳು ಬೇಕಾಗಿದ್ದಾರೆ. ಆಕರ್ಷಕ ವೇತನ ಹಾಗೂ ವಸತಿ ನೀಡಲಾಗುವುದು.
ಕರೆ ಮಾಡಿ : 80735 15690

**ಬೇಕಾಗಿದ್ದಾರೆ**
SHANTHI TVS (CTA)
Double Decor (DVG)
Boys : 1) Sales Executive-02, 2) Field Work-02
Girls : 1) Computer Cash-02, 2) Tele Calling-01, 3) Admin -01
Contact : 9243219553

**ಮಾರಾಟಕ್ಕಿದೆ**
ಸಿಮೆಂಟ್ ಇಟ್ಟಿಗೆ ಮಾಡುವ ಮಷಿನ್ ಮಾರಾಟಕ್ಕಿದೆ.
91085 59008

**ಮಾರಾಟಕ್ಕಿದೆ**
Plumbing store for whole sale
91085 59008

**WANTED**
Receptionist-2
Lab Technician -1
Office Attender -1
Pooja Diaganostics & HCRC
8th Main, 8th Cross, P.J. Extn Davanagere.
98443 26560, 08192 232075

**ಮಳಿಗೆ ಲೀಸ್‌ಗಿವೆ**
15x10 ಮತ್ತು 25x15 ಪಿ.ಬಿ. ರೋಡ್ ಗೋಶಾಲೆ ಎದುರು ಆವರಗೆರೆ, ದಾವಣಗೆರೆ.
91085 59008

**SHOPS FOR RENT**
(with Wash Room Facility)
N.R. Road, Davanagere.
94483 69523

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಪ್ರೊಫೆಷನಲ್ ಮೇಕಪ್ ಆರ್ಟಿಸ್ಟ್ ಕೋರ್ಸ್-2021**
20 ದಿನದ ಬ್ರೈಡಲ್ ಮೇಕಪ್, ಸ್ಯಾರಿ ಡ್ರಾಪಿಂಗ್, ಹೇರ್‌ಸ್ಟೈಲ್ ಕೋರ್ಸ್, Only for ಲೇಡೀಸ್ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
70190 73324

**ತಕ್ಷಣ ಬೇಕಾಗಿದ್ದಾರೆ**
D. Pharmacy ಮತ್ತು B.Pharmacy ಆದವರು QP ಮತ್ತು ಕೆಲಸ ಮಾಡಲು ಬೇಕಾಗಿದ್ದಾರೆ. ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಅನುಭವ ಇರುವ ಹುಡುಗರು/ಹುಡುಗಿಯರು ಮತ್ತು ಮಹಿಳೆಯರು ಬೇಕಾಗಿದ್ದಾರೆ.
89714 03988
88806 67051

**ಗೋಡೌನ್ ಬಾಡಿಗೆಗಿದೆ**
ದಾವಣಗೆರೆ ನಗರದ ಎಪಿಎಂಸಿ ಆವರಣದಲ್ಲಿ 45x120 (5,400 ಚ. ಅಡಿ) ಅಳತೆಯ ಗೋಡೌನ್ ಬಾಡಿಗೆಗಿದೆ. ಜೊತೆಗೆ ಅಟ್ಯಾಚ್ ಬಾತ್ ರೂಂ ಸೌಲಭ್ಯ ಇರುವ 2 ಆಫೀಸ್ ರೂಮುಗಳು ಬಾಡಿಗೆಗಿವೆ. ಸಂಪರ್ಕಿಸಿ.
76767 85353

**ಸೈಟು ಮಾರಾಟಕ್ಕಿದೆ**
30x40 ರ ಕೆ.ಹೆಚ್.ಬಿ. ಸೈಟು ಮಾರಾಟಕ್ಕಿದೆ.
ಪ್ರಸನ್ನ
ಫೋ.: 88670 66465

**ಗೋಲ್ಡನ್ ಲ್ಯಾಂಪ್ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು ರೋಗಿಗಳನ್ನು ನೋಡಿಕೊಳ್ಳಲು ಹೋಂ (ನರ್ಸ್) ಮತ್ತು ಆಯಾಗಳನ್ನು ಕಳಿಸುತ್ತೇವೆ ಮತ್ತು ಮನೆ ಕೆಲಸ, ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲು ತುರ್ತಾಗಿ ಯುವಕ-ಯುವತಿಯರು ಬೇಕಾಗಿದ್ದಾರೆ. ಊಟ-ವಸತಿ ವ್ಯವಸ್ಥೆ ಇದೆ. ಸಂಪರ್ಕಿಸಿ
89047 35301
98447 17618

**ಮನೆ ಬಾಡಿಗೆಗೆ ಇದೆ**
ಭಗತ್ ಸಿಂಗ್ ನಗರ 12 ನೇ ಕ್ರಾಸ್, 3 ನೇ ಮೇನ್ ನಲ್ಲಿ 10x35 ಆರ್.ಸಿ.ಸಿ. ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ
98805 74850

**ಮನೆ ಬಾಡಿಗೆಗೆ ಇದೆ**
1ನೇ ಮಹಡಿ, ಎಂ.ಸಿ.ಸಿ. "ಎ" ಬ್ಲಾಕ್, 6ನೇ ಮೇನ್, 6ನೇ ಕ್ರಾಸ್‌ನಲ್ಲಿ 3 BHK ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ
97435 99030

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ತಕ್ಷಣ ಬೇಕಾಗಿದ್ದಾರೆ**
ಮಹಿಳೆ-ಪುರುಷ ನುರಿತ ಸೆಕ್ಯೂರಿಟಿ ಗಾರ್ಡ್ಸ್ ಹೌಸ್ ಕೀಪಿಂಗ್, ರೂಂ ಬಾಯ್ಸ್ ಬೇಕಾಗಿದ್ದಾರೆ. ESI & PF ಸೌಲಭ್ಯವಿರುತ್ತದೆ. ಹೊಲಗದ್ದೆ, ತೋಟ, ಫಾರಂಗಳಲ್ಲಿ, ಹೋಟೆಲ್ ಕಂಪನಿ, ಗಾರ್ಮೆಂಟ್‌ಗಳಿಗೆ ಕಾರ್ಮಿಕರು ಬೇಕಾಗಿದ್ದಾರೆ.
88616 05406
80736 61259

**ಮನೆಗಳು ಲೀಸ್‌ಗಿವೆ**
3BHK ಗ್ರೌಂಡ್ ಫ್ಲೋರ್, 2BHK 1 ಮತ್ತು 2ನೇ ಮಹಡಿ ಸುಸಜ್ಜಿತ ಮನೆಗಳು ಬಸವೇಶ್ವರ ಬಡಾವಣೆ ಮುಖ್ಯ ರಸ್ತೆಗೆ ಹೊಂದಿಕೊಂಡಿದ್ದು, ಹೋಟೆಲ್ ಸಾಯಿ ಇಂಟರ್ ನ್ಯಾಷನಲ್ ಹಿಂಭಾಗ, ದಾವಣಗೆರೆ ಇಲ್ಲಿ ಲೀಸ್‌ಗಿವೆ ಸಂಪರ್ಕಿಸಿ
9844132621, 9448113829
9740590797

**ಮನೆ ಬಾಡಿಗೆಗೆ ಇದೆ**
ಬಾಪೂಜಿ ಹೈಸ್ಕೂಲ್ ಹಿಂಭಾಗ ಎಂ.ಸಿ.ಸಿ. 'ಬಿ' ಬ್ಲಾಕ್, ಕುವೆಂಪು ನಗರ, # 3810, 2BHK ಫಸ್ಟ್ ಫ್ಲೋರ್, ಬೋರ್‌ವೆಲ್ ಮತ್ತು ಕಾರ್ಪೊರೇಷನ್ ನೀರು ಎರಡೂ ಇದೆ. (ಸಸ್ಯಹಾರಿಗಳಿಗೆ ಮಾತ್ರ)
97421 57455

**ಹೋಂ ನರ್ಸಿಂಗ್ ಸರ್ವೀಸ್**
ಬೆಡ್‌ರಿಡನ್ ಪೇಷೆಂಟ್‌ಗಳಿಗೆ ಸ್ನಾನ, ಡ್ರೆಸಿಂಗ್, ವಾಕಿಂಗ್, ಫಿಜಿಯೋಥೆರಪಿ, ಆಯಿಲ್ ಮಸಾಜ್ ಮತ್ತಿತರೆ ಸರ್ವೀಸ್‌ಗಳು ಮನೆಗೇ ಬಂದು ನೀಡಲಾಗುವುದು.
89711 92936
76250 15036

**REQUIRED**
PUC, BA, B.Com, B.Sc Candidates
Mangalam Hallmark Centre
Vinayaka Tower, 3rd Floor
Near clock Tower, Davangere
Ph. 99809 60614

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
SSLC, PUC, Technical & Non Technical Courses, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789, 87620 58369
94837 64859, 82173 02649

**CHANGE OF NAME**
NAJMA FARHEEN (OLD NAME) D/O SHABBIR AHAMED RESIDENT OF HABEEB MANZIL, 3RD MAIN, 12TH CROSS, VINOBA NAGAR DAVANGERE-577 006. KARNATAKA HAVE CHANGED MY NAME AS NAJMA FAREEN (NEW NAME) VIDE AFFIDAVIT DATED 03.04.2021 SWORN BEFORE NOTARY I.P. BRAMHAKUMAR, DAVANGERE. HENCEFORTH ALL MY TRANSACTION & DEALINGS WILL BE IN MY NEW NAME NAJMA FAREEN
Sd/- NAJMA FAREEN

**ಹೊಲ ಮಾರಾಟಕ್ಕಿದೆ**
ಬೆಂಡಿಗೇರಿ ಹತ್ತಿರ ಅಳಿಗಂಜಿಕೇರಿಯಲ್ಲಿ 4 ಎಕರೆ 6 ಸೆಂಟ್ಸ್ (ಕೆಂಪು ಭೂಮಿ) ಮಾರಾಟಕ್ಕಿದೆ. ಸಂಪರ್ಕಿಸಿರಿ
99007 16026

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**UPS BATTERY & RO PURIFIERS**
Sales & Service
PEACE ENTERPRISES
83100 42490, 99013 18277
98801 56667

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**Smart city Cabs Davanagere**
Etios 4+1 A/c, Minimum 4 Km Rs 100/-, above per kms. Rs 10/- Waiting Charages - 1 Hour Rs. 100/-, 4,8,12 Hour Packages
Call 08192 255555, 99868 18205

**AM BUILDERS AND DEVELOPERS**
S.S. LAYOUT 'A' BLOCK AND VIDHANAGAR-DAVANGERE
3 BHK & 2 BHK FLATS FOR SALE
CONTACT : 95916 08453, 91486 79995

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

## ಕಸಾಪ: ರೇವಣಸಿದ್ದಪ್ಪ ಅಂಗಡಿ ನಾಮಪತ್ರ ಸಲ್ಲಿಕೆ



ಹರಿಹರ, ಏ.5- ತಾಲ್ಲೂಕು ಕಸಾಪ ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ ಅವರು ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿ ಇಂದು ನಾಮಪತ್ರ ಸಲ್ಲಿಸಿದರು.

ನಂತರ ಮಾತನಾಡಿದ ರೇವಣಸಿದ್ದಪ್ಪ ಅಂಗಡಿ, ಕಳೆದ ಹಲವು ದಶಕಗಳಿಂದ ಜಾನಪದ, ಕಲೆ, ಸಾಹಿತ್ಯ. ಸಂಗೀತ, ಮತ್ತು ನಾಡಿನ ಕಲಾ ಪರಂಪರೆಯ ಉಳಿವು ಮತ್ತು ಬೆಳವಣಿಗೆಗೆ ಸದಾಕಾಲವೂ ನಿರಂತರವಾಗಿ ಸೇವೆ ಸಲ್ಲಿಸುವುದರ ಜೊತೆಗೆ, ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳನ್ನು ಮತ್ತು ಪರಿಷತ್ತಿನ ಎಲ್ಲಾ ಯೋಜನೆಗಳನ್ನು ಕನ್ನಡ ಅಭಿಮಾನಿಗಳಿಗೆ ಪರಿಚಯಿಸುತ್ತಾ, ತಾಲ್ಲೂಕು ಕಸಾಪ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದೇನೆ. ಈ ಬಾರಿ ನನ್ನನ್ನು ಕೈ ಬಿಡುವುದಿಲ್ಲ ಎಂಬ ಆತ್ಮವಿಶ್ವಾಸ ಹೊಂದಿದ್ದೇನೆ ಎಂದರು.

ದಾವಣಗೆರೆ ಜಿಲ್ಲಾ ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಬಿ. ಪಾಲಾಕ್ಷಿ, ಶಿಕ್ಷಕರ ಸಂಘದ ಮುಖಂಡರಾದ ಮುದ್ದೇರ ಹನುಮಂತಪ್ಪ ಸಿರಿಗೆರೆ, ಕೆ.ಪಿ. ಬಸವರಾಜ್, ಮುಬಾರಕ್ ಅಲಿ. ಸದಾನಂದ ಕುಂಬಳೂರು, ಸೀತಾ ಎಸ್. ನಾಯ್ಕ್, ರತ್ನವ್ವ ಸಾಲಿಮಠ, ಎ.ಡಿ. ಕೊಟ್ರಪ್ಪ, ಡಾ. ರುದ್ರಮುನಿ ಹಿರೇಮಠ, ಬಿ. ಉಮೇಶ್, ಪಿ. ಕುಲಕರ್ಣಿ, ಬಿ.ವಿ. ವೀರಪ್ಪ, ಬಿ. ಷಣ್ಮುಖ, ಶಾಂತ ಗೌಡ್ರು, ಶಿವಮೂರ್ತಿ, ರತ್ನಮ್ಮ, ಲೀಲಾ, ಮಲ್ಲಮ್ಮ ಅಂಗಡಿ, ರೇಣುಕಾ, ಕುಸುಮ ನಿಂಗಪ್ಪ , ಜಗಳೂರು ಚಂದ್ರಪ್ಪ ಇನ್ನಿತರರಿದ್ದರು.

## ಸಾಮಾಜಿಕ ನ್ಯಾಯಕ್ಕಾಗಿ ಬಾಬೂಜಿ ಹೋರಾಟ ಮಾದರಿ



**ಡಾ. ಬಾಬು ಜಗಜೀವನ ರಾಮ್ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ. ಹಲಸೆ ಅಭಿಪ್ರಾಯ**

ದಾವಣಗೆರೆ, ಏ.5 - ಆರ್ಥಿಕ, ಸಾಮಾಜಿಕ ಸಮಾನತೆಯ ಮೂಲಕ ಸಮಾಜದ ಸುಧಾರಣೆ ಸಾಧ್ಯ ಎಂಬುದನ್ನು ಪ್ರತಿಪಾದಿಸಿ, ಆ ತತ್ವಗಳ ಮೂಲಕ ದೇಶದ ಉನ್ನತಿಗೆ ಶ್ರಮಿಸಿದ ಮಹಾನ್ ನಾಯಕ ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನರಾಂ ಎಲ್ಲರಿಗೂ ಪ್ರೇರಣೆಯಾಗಿದ್ದಾರೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಅಭಿಪ್ರಾಯಪಟ್ಟರು.

ದಾವಣಗೆರೆ ವಿಶ್ವವಿದ್ಯಾನಿಲಯ ಡಾ. ಬಾಬು ಜಗಜೀವನರಾಂ ಅಧ್ಯಯನ ಕೇಂದ್ರದ ವತಿಯಿಂದ ಸೋಮವಾರ ಏರ್ಪಡಿಸಿದ್ದ ಬಾಬೂಜಿ ಜನ್ಮ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ದೇಶದಲ್ಲಿ ಆಹಾರದ ಸಂಕಷ್ಟ ಎದುರಾಗಿದ್ದಾಗ ಹಸಿರು ಕ್ರಾಂತಿಯ ಮೂಲಕ ಜನರ ಹಸಿವನ್ನು ಇಂಗಿಸಿದರು. ಅಲ್ಲದೆ ಇತರೆ ದೇಶಗಳಿಗೂ ಆಹಾರ ನೀಡಿ, ಜಾಗತಿಕ ಮಟ್ಟದಲ್ಲಿ ಭಾರತದ ಸೌಹಾರ್ದ ಸಹಬಾಳ್ವೆಯ ಸಂಬಂಧವನ್ನು ಎತ್ತಿ ಹಿಡಿದರು. ಅವರ ಮೌಲಿಕ ತತ್ವಗಳು, ಆದರ್ಶಗಳು ಯುವಜನರಿಗೆ ಮಾರ್ಗದರ್ಶನವಾಗಿವೆ ಎಂದು ನುಡಿದರು.

ಸಮಾಜದಲ್ಲಿ ತಾರತಮ್ಯ ಧೋರಣೆ ನಿವಾರಿಸುವ ಮಹತ್ವಾಕಾಂಕ್ಷೆ ಹೊಂದಿದ್ದ ಬಾಬೂಜಿ, ಡಾ.ಬಿ.ಆರ್.ಅಂಬೇಡ್ಕರ್ ಅವರಂತೆ ಕಾರ್ಮಿಕರು, ರೈತರು, ಕೃಷಿ ಕೂಲಿ ಕಾರ್ಮಿಕರ ಏಳ್ಗೆಗೆ ಹಲವಾರು ಯೋಜನೆಗಳನ್ನು ಅನುಷ್ಠಾನಕ್ಕೆ ತಂದರು. ಬಡಜನರ ಆರ್ಥಿಕ ಭದ್ರತೆ, ಕೌಟುಂಬಿಕ ನೆಮ್ಮದಿ ಹಾಗೂ ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ಆದ್ಯತೆ ನೀಡಿ ಕಾರ್ಯ ಯೋಜನೆಗಳನ್ನು ಜಾರಿಗೆ ತಂದಿದ್ದು ಗಮನಾರ್ಹ ಎಂದರು.

ಕುವೆಂಪು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಪ್ರೊ. ಶಿವಾನಂದ ಕೆಳಗಿನಮನಿ ಅವರು ಹಸಿರು ಕ್ರಾಂತಿ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಡಾ.ಬಾಬು ಜಗಜೀವನರಾಂ ಅವರ ಪಾತ್ರ ಕುರಿತು ಮಾತನಾಡಿ, ದೇಶವನ್ನು ಹೀನಾಯವಾಗಿ ಕಾಡುತ್ತಿದ್ದ, ಸಾಮಾಜಿಕ ವ್ಯವಸ್ಥೆಯ ಮೂಲ ಸಮಸ್ಯೆಯಾಗಿದ್ದ ಅಸ್ಪೃಶ್ಯತೆ, ತಾರತಮ್ಯ ಧೋರಣೆ ಹಾಗೂ ಮೇಲು-ಕೀಳು ಎಂಬ ಭೇದಭಾವವನ್ನು ತೊಡೆದು ಹಾಕಲು ಬಾಬೂಜಿ ಅವರ ಹೋರಾಟ ಅವಿಸ್ಮರಣೀಯ ಎಂದರು.

ಸಿಂಡಿಕೇಟ್ ಸದಸ್ಯ ಟಿ. ಇನಾಯತ್‌ಉಲ್ಲಾ, ಬಾಬೂಜಿ ಕೇವಲ ರಾಜಕಾರಣಿ ಅಲ್ಲ. ಅವರೊಬ್ಬ ಹೋರಾಟಗಾರ. ದಕ್ಷ ಮತ್ತು ಪ್ರಾಮಾಣಿಕ ಆಡಳಿತಗಾರರಾಗಿದ್ದರು. ನಾಲ್ಕು ದಶಕಗಳ ಕಾಲ ಸಂಸದರಾಗಿ ಜನಸೇವೆ ಸಲ್ಲಿಸಿದ್ದಾರೆ ಎಂದರು.

ಕುಲಸಚಿವರಾದ ಪ್ರೊ.ಗಾಯತ್ರಿ ದೇವರಾಜ್ ಮಾತನಾಡಿ, ಅವರ ಸಾಮಾಜಿಕ ಕಳಕಳಿ, ರಾಜಕೀಯ ಚಿಂತನೆಗಳು, ಹೋರಾಟದ ಮನೋಭಾವ, ಅಭಿವೃದ್ಧಿಪರ ಕನಸುಗಳು ಎಲ್ಲರಿಗೂ ಮಾದರಿಯಾಗಿವೆ ಎಂದು ನುಡಿದರು.

ಪರೀಕ್ಷಾಂಗ ಕುಲಸಚಿವರಾದ ಪ್ರೊ. ಅನಿತಾ ಎಚ್.ಎಸ್, ಹಣಕಾಸು ಅಧಿಕಾರಿ ಪ್ರಿಯಾಂಕ ಡಿ ಉಪಸ್ಥಿತರಿದ್ದರು. ಸಹಾಯಕ ಪ್ರಾಧ್ಯಾಪಕ ಬಿ.ಎಸ್. ಪ್ರದೀಪ್ ಸ್ವಾಗತಿಸಿದರು.

ಬಾಬು ಜಗಜೀವನರಾಂ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಎಚ್.ವಿಶ್ವನಾಥ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರೊ. ಗೋಪಿನಾಥ ವಂದಿಸಿದರು. ಡಾ. ಭೀಮಾಶಂಕರ ಜೋಶಿ ನಿರೂಪಿಸಿದರು.

## ಮಕ್ಕಳ ಸ್ನೇಹಿ ಅಧಿಕಾರಿಗಳಿಗೆ ಸನ್ಮಾನ, ಕಾರ್ಯಾಗಾರ

ದಾವಣಗೆರೆ, ಏ.5- ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಜಿಲ್ಲಾಡಳಿತ ಮತ್ತು ಮಕ್ಕಳ ಹಕ್ಕುಗಳ ಶಿಕ್ಷಣ ಮತ್ತು ಜಾಗೃತಿ ಆಂದೋಲನ ಸಿಆರ್‌ಇಎಂ ಯೋಜನೆ ದಾವಣಗೆರೆ ಇವರ ಸಂಯುಕ್ತ ಆಶ್ರಯದಲ್ಲಿ ಏ.09 ರಂದು ಬೆಳಿಗ್ಗೆ 11.30 ಕ್ಕೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಕ್ಕಳ ಸ್ನೇಹಿ ಅಧಿಕಾರಿಗಳಿಗೆ ಸನ್ಮಾನ ಸಮಾರಂಭ ಮತ್ತು ಸಿಆರ್‌ಇಎಂ ಯೋಜನೆಯ ಅನುಷ್ಠಾನದಲ್ಲಿ ಇಲಾಖೆಗಳ ಸಮನ್ವಯತೆ ಕುರಿತ ಜಿಲ್ಲಾ ಮಟ್ಟದ ಕಾರ್ಯಾಗಾರ ಏರ್ಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

## ಇಂದು ಜಿಲ್ಲಾ ಕಾಂಗ್ರೆಸ್ ವತಿಯಿಂದ ವೀರ ಯೋಧರಿಗೆ ಶ್ರದ್ಧಾಂಜಲಿ

ಛತ್ತೀಸಘಡದ ಸುಕ್ಮಾ-ಬಿಜಾಪುರ ಅರಣ್ಯ ಪ್ರದೇಶದಲ್ಲಿ ನಡೆದ ಅತೀ ಭೀಕರ ನಕ್ಸಲ್ ದಾಳಿಗೆ ಹುತಾತ್ಮರಾದ 22 ವೀರ ಯೋಧರಿಗೆ ಭಾವಪೂರ್ಣ ಶ್ರದ್ಧಾಂಜಲಿ ಹಾಗೂ ಕೇಂದ್ರ ಬಿಜೆಪಿ ಸರ್ಕಾರದ ನಿರ್ಲಕ್ಷ್ಯ ಧೋರಣೆ ಖಂಡಿಸಿ ಇಂದು ಸಂಜೆ 6 ಕ್ಕೆ ರಾಂ ಅಂಡ್ ಕೋ ವೃತ್ತದಲ್ಲಿ ಮೊಂಬತ್ತಿ ಹಚ್ಚಿ ಶ್ರದ್ಧಾಂಜಲಿ ಸಲ್ಲಿಸಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪನವರ ಅಧ್ಯಕ್ಷತೆ ವಹಿಸುವರು.

## ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಶಿಕ್ಷಕರಿಗೆ ದ್ವಿಚಕ್ರ ವಾಹನ

**ಶಾಸಕ ಅರುಣಕುಮಾರ ಪೂಜಾರ್**



ರಾಣೇಬೆನ್ನೂರು, ಏ.5- ನನ್ನ ಕ್ಷೇತ್ರದಲ್ಲಿ ಪ್ರತಿಭಾವಂತರ ಸಂಖ್ಯೆ ಹೆಚ್ಚಾಗಬೇಕು. ಈ ಕ್ಷೇತ್ರ ಶಿಕ್ಷಣದಲ್ಲಿ ಮಾದರಿ ಆಗಬೇಕು ಎನ್ನುವ ಕನಸು ನನ್ನದಾಗಿದೆ ಎಂದು ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ಅವರು ತಾಲ್ಲೂಕಿನ ಮುಷ್ಟೂರು ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕಟ್ಟಲಾದ ಶಾಲಾ ಕಟ್ಟಡ ಉದ್ಘಾಟಿಸಿ ಮಾತನಾಡುತ್ತಿದ್ದರು.

ಶಿಕ್ಷಕರು ನಗರದಿಂದ ಸೇವಾ ಸ್ಥಳಕ್ಕೆ ಆಗಮಿಸಲು ಸಾರಿಗೆ ಜೊತೆ ಅನೇಕ ಸಮಸ್ಯೆಗಳಿವೆ. ಹಾಗಾಗಿ ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕುತ್ತಿಲ್ಲ ಎನ್ನುವ ಅರಿವು ನನಗೆ ಬಂದಿದ್ದು, ಅಧಿಕಾರಿಗಳ ಜೊತೆ ಈ ಬಗ್ಗೆ ಚರ್ಚಿಸಿದ್ದೇನೆ. ಹಾಗಾಗಿ ಶಿಕ್ಷಕರಿಗೆ ಬೈಕ್, ಶಿಕ್ಷಕಿಯರಿಗೆ ಸ್ಕೂಟಿ ಕೊಡಿಸುವ ಆಲೋಚನೆ ನನ್ನದಾಗಿದೆ ಎಂದು ಶಾಸಕ ಪೂಜಾರ ಹೇಳಿದರು. ನಾನು ಶಂಕುಸ್ಥಾಪನೆ ಮಾಡಿದ ಕಾಮಗಾರಿಗಳು ನನ್ನಿಂದಲೇ ಉದ್ಘಾಟನೆಗೊಳ್ಳಬೇಕು. ನಾನು ಪೂಜೆ ಮಾಡಿದ ಕಾಮಗಾರಿಯನ್ನು ಇನ್ನಾರೋ ಬಂದು ಉದ್ಘಾಟನೆ ಮಾಡು ವುದು ಸರಿಯಲ್ಲ. ಕೊರೊನಾ ಸಂಕಷ್ಟದ ಸಮಯದಲ್ಲೂ ಸಹ ಈ ಬಗ್ಗೆ ಎಚ್ಚರ ವಹಿಸಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಗ್ರಾ.ಪಂ. ಅಧ್ಯಕ್ಷೆ ಚಂದ್ರಮ್ಮ ಹಿರೇಮರದ, ಉಪಾಧ್ಯಕ್ಷೆ ಮಂಜುಳಾ ಪಾಟೀಲ್, ಪ್ರಾಧಿಕಾರದ ಅಧ್ಯಕ್ಷ ಚೋಳಪ್ಪ ಕಸವಾಳ, ಶಿಕ್ಷಣಾಧಿಕಾರಿ ಗುರುಪ್ರಸಾದ್, ಮುಖಂಡರಾದ ಹರಿಹರ ಗೌಡ ಪಾಟೀಲ, ಸಿ.ಪಿ. ಪಾಟೀಲ ಇನ್ನಿತರರಿದ್ದರು.

## ನಗರದಲ್ಲಿ ಇಂದು ಉಚಿತ ಮಜ್ಜಿಗೆ, ನೀರು ವಿತರಣಾ ಕಾರ್ಯಕ್ರಮ

ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಜಯದೇವ ಸರ್ಕಲ್‌ನಲ್ಲಿ ಉಜಿತ ಮಜ್ಜಿಗೆ ಮತ್ತು ನೀರು ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶ್ರೀ ಬಸವಪ್ರಭು ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ಅತಿಥಿಗಳಾಗಿ ಸ್ಫೂರ್ತಿ ಸೇವಾ ಟ್ರಸ್ಟ್‌ನ ಸತ್ಯನಾರಾಯಣ ಮೂರ್ತಿ ಹಾಗೂ ದಯಾಮರಣ ಹೋರಾ ಟಗಾರ್ತಿ ಹೆಚ್.ಬಿ. ಕರಿಬಸಮ್ಮ ಭಾಗವಹಿಸಲಿದ್ದಾರೆ. ಶ್ರೀ ಸಾಯಿ ಸೇವಾ ಟ್ರಸ್ಟ್‌ನ ಎಂ. ಶಿವಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

## ಉಚಿತ ಕ್ರಿಕೆಟ್ ತರಬೇತಿ ಶಿಬಿರ



**ಹರಪನಹಳ್ಳಿ : ಎಂ.ಪಿ.ರವೀಂದ್ರ ಜನ್ಮ ದಿನಾಚರಣೆ**

ಹರಪನಹಳ್ಳಿ, ಏ.5- ಪಟ್ಟಣದ ಎಸ್. ಯು.ಜೆ.ಎಂ ಪಿಯು ಕಾಲೇಜಿನಲ್ಲಿ ಎಂ.ಪಿ. ಪ್ರಕಾಶ್ ಸಮಾಜ ಮುಖಿ ಟ್ರಸ್ಟ್‌ನ ಸಹಯೋಗದಲ್ಲಿ ಕೆಪಿಸಿಸಿ ಮಾಧ್ಯಮ ವಿಶ್ಲೇಷಕಿ ಎಂ.ಪಿ.ವೀಣಾ ಮಹಾಂತೇಶ್ ಚರಂತಿಮಠ ಅವರ ಸಹೋದರ ಹಾಗೂ ಹರಪನಹಳ್ಳಿಯ ಮಾಜಿ ಶಾಸಕ ದಿ. ಎಂ.ಪಿ.ರವೀಂದ್ರ ಅವರ 52ನೇ ವರ್ಷದ ಜನ್ಮ ದಿನಾಚರಣೆ ಅಂಗವಾಗಿ ಉಚಿತ ಕ್ರಿಕೆಟ್ ತರಬೇತಿ ಶಿಬಿರ ಆಯೋಜಿಸಲಾಗಿತ್ತು.

ಕೆಪಿಸಿಸಿ ಮಾಧ್ಯಮ ವಿಶ್ಲೇಷಕರಾದ ಎಂ.ಪಿ.ವೀಣಾ ಮಹಾಂತೇಶ್ ಚರಂತಿಮಠ ಮಾತನಾಡಿ, ನನ್ನ ಸಹೋದರ ಎಂ.ಪಿ.ರವೀಂದ್ರ ಅವರು ಶಾಸಕರಾಗಿದ್ದಾಗ ಕ್ಷೇತ್ರದಲ್ಲಿ ಮಾಡಿದ ಜನಪರ ಅಭಿವೃದ್ಧಿ ಕಾರ್ಯಗಳು ಚಿರಸ್ಥಾಯಿಯಾಗಿದ್ದು, ಇಂದಿಗೂ ಅವರು ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿದ್ದಾರೆ ಎಂದ ಅವರು, ಯುವಕರಲ್ಲಿ ಕ್ರೀಡೆಗಳು ಆರೋಗ್ಯ ವೃದ್ಧಿಸುತ್ತವೆ. ಹಾಗಾಗಿ ಇರುವ ಸಮಯದಲ್ಲಿ ಕೆಲಸ ಸಮಯ ಕ್ರೀಡೆಗಳಿಗಾಗಿ ಮೀಸಲಿಡಬೇಕು ಎಂದರು.

ಪುರಸಭೆ ಮಾಜಿ ಅಧ್ಯಕ್ಷರಾದ ಕವಿತಾ ವಾಗೀಶ್, ಚಿಗಟೇರಿ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಹೆಚ್.ಶಿವರಾಜ್, ಹರಪನಹಳ್ಳಿ ಬ್ಲಾಕ್ ಯುವ ಕಾಂಗ್ರೆಸ್ ಉಪಾಧ್ಯಕ್ಷ ಮಕ್ರಬ್ಬಿ ದಾದಾಪೀರ್, ಪಿ.ಮನೋಜ್ ಕುಮಾರ್, ಗಾಯತ್ರಮ್ಮ, ಕಡಬಗೆರೆ ನರೇಂದ್ರ, ಗುಡಿಹಳ್ಳಿ ಗೋಪಿ, ಚೇತನ್‌ಕುಮಾರ್ ಸೇರಿದಂತೆ ಮತ್ತಿತರರು ಶಿಬಿರದಲ್ಲಿ ಭಾಗವಹಿಸಿದ್ದರು.

## ರೋಗಿಗಳಿಗೆ ಹಣ್ಣು, ಬಿಸ್ಕತ್ತು ವಿತರಣೆ



ಹರಪನಹಳ್ಳಿ, ಏ.5- ಮಾಜಿ ಶಾಸಕರು ಹಾಗೂ ಯುವಕರ ಆಶಾಕಿರಣ ದಿ. ಎಂ.ಪಿ.ರವೀಂದ್ರ ಅವರ ಜನ್ಮ ದಿನಾಚರಣೆ ಪ್ರಯುಕ್ತ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು, ಬಿಸ್ಕತ್ತು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಶಂಕರಪ್ಪ, ತಾ.ಪಂ. ಸದಸ್ಯರಾದ ಶಿವರಾಜ್, ಪುರಸಭಾ ಮಾಜಿ ಸದಸ್ಯರಾದ ಸಂತೋಷ್, ಜೈನ್, ವಿಲ್ಸನ್ ಸ್ವಾಮಿ, ಕೋಡಿಹಳ್ಳಿ ಕೊಟ್ರೇಶ್, ಕರೆಯತ್ತಿನ ಕೊಟ್ರೇಶ್, ಬಾವಿಮನಿ ಕೊಟ್ರೇಶ್, ಪುನೀತ್ ದೊಡ್ಮನೆ, ಶಿವರಾಜ್ ಪಾಟೀಲ್, ಅಭಿಮಾನಿಗಳು ಉಪಸ್ಥಿತರಿದ್ದರು.

## ಬೆಳ್ಳೂಡಿ ಶಾಖಾಮಠದಲ್ಲಿ ಗಮನ ಸೆಳೆದ ಮಹಾಕುಂಭಾಭಿಷೇಕ, ದೊಡ್ಡ ಎಡೆ ಪೂಜೆ





ಮಲೇಬೆನ್ನೂರು, ಏ.5- ಕಾಗಿನೆಲೆ ಕನಕ ಗುರುಪೀಠದ ಬೆಳ್ಳೂಡಿ ಶಾಖಾಮಠದಲ್ಲಿ ಸೋಮವಾರ ನೂತನ ಹೊರ ಬೀರದೇವರ ದೇವಸ್ಥಾನದಲ್ಲಿ ಪ್ರಾಣ ಪ್ರತಿಷ್ಠಾಪನೆ ಹಾಗೂ ಮಹಾಕುಂಭಾಭಿಷೇಕ ಕಾರ್ಯಕ್ರಮಗಳು ಬೀರದೇವರುಗಳ ಸಮ್ಮುಖದಲ್ಲಿ ಶ್ರದ್ಧಾ-ಭಕ್ತಿಯಿಂದ ನೆರವೇರಿದವು.

ದೇವರ ಪ್ರಾಣ ಪ್ರತಿಷ್ಠಾಪನೆ ನಂತರ ಅಭಿಷೇಕ, ಪೂಜೆಗಳು ಮತ್ತು ಬೀರದೇವರುಗಳಿಗೆ ದೊಡ್ಡ ಎಡೆಪೂಜೆ ಮಾಡುವ ಮೂಲಕ 3 ದಿನಗಳ ಕಾರ್ಯಕ್ರಮಗಳಿಗೆ ತೆರೆ ಎಳೆಯಲಾಯಿತು. ಸಂಜೆ ಎಲ್ಲಾ ಬೀರದೇವರುಗಳಿಗೆ ವಸ್ತ್ರ, ಅಕ್ಕಿ, ಕಾಣಿಕೆ, ಹಣ್ಣು-ಕಾಯಿ ನೀಡಿ ಬೀಳ್ಕೊಡಲಾಯಿತು.

ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಅವರ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮಗಳಲ್ಲಿ ಹೊಸದುರ್ಗ ಶಾಖಾಮಠದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ, ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ, ಹೊಸದುರ್ಗದ ಕುಂಚಿಟಿಗರ ಗುರುಪೀಠದ ಡಾ. ಶ್ರೀ ಶಾಂತವೀರ ಸ್ವಾಮೀಜಿ, ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಮಾದಾರ ಚನ್ನಯ್ಯ ಸ್ವಾಮೀಜಿ, ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಅಂಬಿಗರ ಚೌಡಯ್ಯ ಗುರುಪೀಠದ ಶ್ರೀ ಶಾಂತಭೀಷ್ಮ ಅಂಬಿಗರ ಚೌಡಯ್ಯ ಸ್ವಾಮೀಜಿ, ರಾಮಾನುಜ ಮಠದ ಶ್ರೀ ತ್ರಿದಂಡಿ ವೆಂಕಟರಾಮಾನುಜ ಜೀಯರ್, ಸ್ವಾಮಿ ಅಮೋಘಸಿದ್ದ ಸಿದ್ದೇಶ್ವರಾನಂದರು ಸೇರಿದಂತೆ ವಿವಿಧ ಪೂಜ್ಯರು ಭಾಗವಹಿಸಿದ್ದರು.

ಜಿ.ಪಂ. ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ, ತಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ, ತಾ. ಕುರುಬ ಸಮಾಜದ ಕಾರ್ಯದರ್ಶಿ ಕೆ.ಪಿ. ಗಂಗಾಧರ್, ನಿವೃತ್ತ ಅಧಿಕಾರಿಗಳಾದ ಭಾನುವಳ್ಳಿ ಚಂದ್ರಪ್ಪ, ಕುಣೆಬೆಳಕೆರೆ ದೇವೇಂದ್ರಪ್ಪ, ಉದ್ಯಮಿ ನಂದಿಗಾವಿ ಶ್ರೀನಿವಾಸ್, ಶಿಕ್ಷಕ ಪದ್ದಪ್ಪ, ಉಪನ್ಯಾಸಕ ಬೀರೇಶ್, ಮಲೇಬೆನ್ನೂರಿನ ಪಿ. ಹೆಚ್. ಶಿವು, ಭೋವಿಕುಮಾರ್ ಮತ್ತಿತರರು ಈ ವೇಳೆ ಹಾಜರಿದ್ದರು.

ಸಿಪಿಐ ಸತೀಶ್, ಹರಿಹರ ಗ್ರಾಮಾಂತರ ಪಿಎಸ್‌ಐ ರವಿಕುಮಾರ್ ನೇತೃತ್ವದಲ್ಲಿ ಮೂರು ದಿನವೂ ಸೂಕ್ತ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

## 11 ರಂದು ರಾಜ್ಯ ಮಟ್ಟದ ಕವಿಗೋಷ್ಠಿ

ದಾವಣಗೆರೆ, ಏ.5- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ 2021ನೇ ಏಪ್ರಿಲ್ 11 ರಂದು ಭಾನುವಾರ ಬೆಳಿಗ್ಗೆ 10.35ಕ್ಕೆ ಜಿಲ್ಲಾ ಮಟ್ಟದ ಯುಗಾದಿ ಕವಿಗೋಷ್ಠಿಯನ್ನು ಹಮ್ಮಿಕೊಂಡಿದ್ದು, ಹೊರ ಜಿಲ್ಲೆಗಳಿಂದ ಅನೇಕ ಕವಿ-ಕವಯತ್ರಿಯರ ನಿರೀಕ್ಷೆಗೂ ಮೀರಿ ಕವನಗಳು ಹೆಸರು ನೋಂದಾಯಿಸಿರುವ ಕಾರಣ ಅವರೆಲ್ಲರ ಅಪೇಕ್ಷೆ ಮೇರೆಗೆ ರಾಜ್ಯ ಮಟ್ಟಕ್ಕೆ ವಿಸ್ತರಿಸಲಾಗಿದೆ ಎಂದು ಕಲಾಕುಂಚದ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ಡಯಟ್ ಸಂಸ್ಥೆಯ ಸಭಾಂಗಣದಲ್ಲಿ ಸರಳವಾಗಿ ಹಮ್ಮಿಕೊಳ್ಳಲಾದ ಈ ಕವಿಗೋಷ್ಠಿಯಲ್ಲಿ ಭಾಗವಹಿಸುವ ಆಸಕ್ತರು ತಮ್ಮ ಹೆಸರು ಊರು, ತಾಲ್ಲೂಕು ಮತ್ತು ಮೊಬೈಲ್ ಸಂಖ್ಯೆಯನ್ನು ಈ ವ್ಯಾಟ್ಸಾಪ್ ನಂಬರ್ 9538732777ಗೆ ನೋಂದಾಯಿಸಬಹುದಾಗಿದೆ.

ಕವಿಗೋಷ್ಠಿಯಲ್ಲಿ ಭಾಗವಹಿಸುವವರು 20 ರಿಂದ 25 ಸಾಲುಗಳಿಗೆ ಮೀರದಂತೆ ಯುಗಾದಿ ಹಬ್ಬದ ಕುರಿತು ಕವನ ಬರೆದು, ವಾಚನ ಮಾಡಬಹುದಾಗಿದೆ. ಒಬ್ಬರಿಗೆ ಒಂದೇ ಕವನ ವಾಚನ ಮಾಡಲು ಅವಕಾಶ. ಕವಿಗೋಷ್ಠಿಯಲ್ಲಿ ಭಾಗವಹಿಸಿದ ಸರ್ವರಿಗೂ ನೆನಪಿನ ಕಾಣಿಕೆ, ಪ್ರಮಾಣ ಪತ್ರ ವಿತರಿಸಲಾಗುವುದು.

## ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುದೇನೆಂದರೆ, ದಾವಣಗೆರೆ ತಾಲ್ಲೂಕು, ಆವರಗೆರೆ ಗ್ರಾಮದ ಸರ್ವೆ ನಂಬರ್ 246/2 ರ ಜಮೀನಿನಲ್ಲಿ ವಿಂಗಡಿಸಿ ಗೌಡರ ಎ.ಎಂ.ಜಯದೇವಪ್ಪ ಬಡಾವಣೆಯಲ್ಲಿರುವ ಸೈಟುಗಳ ಪೈಕಿ ಸೈಟ್ ನಂ.8, ದಾವಣಗೆರೆ ಮಹಾನಗರ ಪಾಲಿಕೆ ಡೋರ್ ನಂ.392/ಎ- ನಂ 9, ದಾವಣಗೆರೆ ಮಹಾನಗರ ಪಾಲಿಕೆ ಡೋರ್ ನಂ. 392/ಎ-9 ಅಳತೆ 12.6+18.6/2x40 ಅಡಿ (624 ಚದರಡಿ) ಯುಳ್ಳ ನಿವೇಶನಗಳನ್ನು ಶ್ರೀಮತಿ ಟಿ.ಶ್ವೇತಾ ಕೋಂ ಸಿ.ರಘು ಮತ್ತು ಶ್ರೀಮತಿ ಚಂದ್ರಮ್ಮ ಕೋಂ ಕೆ.ಆರ್. ಚಂದ್ರಪ್ಪ ಎಂಬುವವರು ಶ್ರೀಮತಿ ಗೀತಾ ಕೋಂ ಲೋಕೇಶಪ್ಪ ಕೆ. ಎಂಬುವವರಿಂದ ದಾವಣಗೆರೆ ಸಬ್ ರಿಜಿಸ್ಟಾರ್ ಕಛೇರಿಯ ನೋಂದಾವಣೆ ಪತ್ರ ಸಂಖ್ಯೆ 9798/2019-20ರ ಮೂಲಕ ಖರೀದಿಸಿರುತ್ತಾರೆ. ಸದರಿ ಸೊತ್ತುಗಳಲ್ಲಿ ಮನೆ ಕಟ್ಟಲು ಶ್ರೀಮತಿ ಟಿ.ಶ್ವೇತಾ ಕೋಂ ಸಿ.ರಘು ಮತ್ತು ಶ್ರೀಮತಿ ಚಂದ್ರಮ್ಮ ಕೋಂ ಕೆ.ಆರ್. ಚಂದ್ರಪ್ಪ ಇವರು ರೆಪ್ಕೋ ಹೋಂ ಫೈನಾನ್ಸ್ ಲಿಮಿಟೆಡ್ ದಾವಣಗೆರೆ ಶಾಖೆ ಇವರಲ್ಲಿ ಸಾಲ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿರುತ್ತಾರೆ.

ಆದ್ದರಿಂದ, ಸದರಿ ಸೊತ್ತಿನ ಮೇಲೆ ಯಾವುದಾದರೂ ವ್ಯಕ್ತಿಗಾಗಲೀ, ಹಣಕಾಸು ಸಂಸ್ಥೆಗಳಿಗಾಗಲೀ, ಯಾವುದೇ ವಿಧದ ಹಕ್ಕಿದ್ದಲ್ಲಿ, ಹೊಣೆಗಾರಿಕೆಗಳಿದ್ದಲ್ಲಿ, ಪಾಲುದಾರಿಕೆ ಇದ್ದಲ್ಲಿ, ಅಡವಿನ ಅಧಿಕಾರವಿದ್ದಲ್ಲಿ ಅಥವಾ ಯಾವುದೇ ರೂಪದ ತಕರಾರುಗಳಿದ್ದಲ್ಲಿ ಅವರು ಆಕ್ಷೇಪಣೆಗಳನ್ನು ದೃಢೀಕರಿಸುವ ದಾಖಲೆ ಪತ್ರಗಳೊಂದಿಗೆ ಈ ರೆಪ್ಕೋ ಹೋಂ ಫೈನಾನ್ಸ್ ಲಿಮಿಟೆಡ್ ದಾವಣಗೆರೆ ಶಾಖೆಗಾಗಲೀ ಈ ಕೆಳಗೆ ಸಹಿ ಮಾಡಿರುವವರಿಗೆ ಈ ಪ್ರಕಟಣೆ ಪ್ರಕಟವಾದ ಏಳು (7) ದಿನಗಳೊಳಗಾಗಿ ಸಲ್ಲಿಸಬಹುದು.

ದಾವಣಗೆರೆ
ದಿನಾಂಕ: 05.04.2021

**ಶಾಮನೂರು ಪ್ರಕಾಶ್**, ವಕೀಲರು,
2159/2, 4ನೇ ಮುಖ್ಯರಸ್ತೆ, ಎಂ.ಸಿ.ಸಿ ಎ ಬ್ಲಾಕ್,
ದಾವಣಗೆರೆ **ಮೊ: 94495 12232**



